ಹಿತ್ತಲ ಗಿಡ

ಚಾತುರ್ಮಾಸಿಕ

ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಪೈರು 11, ಕೊಯಿಲು 2, ಮೇ - ಆಗಸ್ಟ್, 2005

ನೈಸರ್ಗಿಕ ಕೃಷಿಯ ರೂವಾರಿ ಸುಭಾಷ್ ಪಾಳೇಕರ



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕ ಮಂಡಳಿ

ಗೌರವ ಸಂಪಾದಕ:

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ, ಕೃಷಿ ಅರ್ಥ ಶಾಸ್ತ್ರ ವಿಭಾಗ,
ಕೃಷಿ ವಿಶ್ವ ವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು - 560 065

ಉಪ ಸಂಪಾದಕರು: ತೇಜಸ್ವಿನಿ ಶರ್ಮ

ಲೇಖನ ಪರಿಷ್ಕಾರ: ಪಿ.ಎಸ್. ಶ್ರೀಕಂಠ ಮೂರ್ತಿ ಮತ್ತು ಮೀನಾಕ್ಷಿ ಶರ್ಮ

ತಾಂತ್ರಿಕತೆ: ಭಾಗ್ಯಲಕ್ಷ್ಮಿ .ವಿ

ಪ್ರಕಟಣಾ ಸಹಾಯಕರು:
ಸಿದ್ಧರಾಮೇ ಗೌಡ, ಪ್ರಭಾಕರ್ ಸಿ.ಗೌಡ, ಸಂತೋಷ್, ವಿ.ಆರ್, ಪ್ರಮೀಳ ಬಿ.ಎಂ., ಪದ್ಮಾವತಮ್ಮ ವಿ ಮತ್ತು ಗೋಪಾಲ .ಕೆ

ಹನಿ ಬೀ ಬಳಗ

Honey Bee (*English*)
Prof. Anil K.Gupta, Indian Institute of Management, Vastrapur, Ahmedabad - 380 015, Ph: 079-26307241
email: anilg@nifindia.org, honeybee@sristi.org

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8, Bhubaneswar - 751 012, Orissa, balaram_sahu@hotmail.com

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra, Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

&

Hittalagida (*Kannada*)

ಹಿತ್ತಲ ಗಿಡದ ಪೋಷಣೆಗೆ ಸಹಾಯ:
PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), Ahmedabad & **NIF** (National Innovation Foundation, India), New Delhi

ಸಂಪಾದಕೀಯ

ದೇಸಿ ಆಕಳು, ಎರೆ ಹುಳು, ನಾಟಿ ತಳಿಗಳು, ಮಿಶ್ರ ಬೆಳೆ ಇತ್ಯಾದಿ ದೇಶೀಯ ಕೃಷಿಯ ತಾಂತ್ರಿಕ ಅಂಶಗಳನ್ನು ಕೇಂದ್ರವಾಗಿಟ್ಟು ಕೊಂಡು ಮಹಾರಾಷ್ಟ್ರದ ನೈಸರ್ಗಿಕ ಕೃಷಿ ಹರಿಕಾರ ಸುಭಾಷ್ ಪಾಳೇಕರ ತಮ್ಮ ಕೃಷಿ ಪದ್ಧತಿಯ ಅವಿರತ ವಿಸ್ತರಣೆ ಕಾರ್ಯದಲ್ಲಿ ತೊಡಗಿರುವರು. ಕರ್ನಾಟಕ ರಾಜ್ಯ ರೈತ ಸಂಘವಂತೂ ಇದನ್ನು ಅತ್ಯಂತ ನಿಷ್ಠೆಯಿಂದ ಹೊಲ ಗದ್ದೆಗಳಲ್ಲಿ ಸಾಕಾರಗೊಳಿಸಲು ಸಜ್ಜಾಗಿ ನಿಂತಿದೆ. ಈ ಪದ್ಧತಿಯನ್ನು ಅನುಸರಿಸಿ, ಟಿ. ನರಸೀಪುರ ತಾಲ್ಲೂಕಿನ ರೈತ ಮುಖಂಡ ಬನ್ನೂರು ಕೃಷ್ಣಪ್ಪ ಒಂದು ಎಕರೆಯಲ್ಲಿ ಕೇವಲ *3500* ರೂ. ವೆಚ್ಚ ಮಾಡಿ, *1.75* ಲಕ್ಷ ರೂ.ಗಳ ಸಮೃದ್ಧ ಬಾಳೆ ಫಸಲು ಪಡೆದಿರುವರು. ಹಾಗೇ, ಎಕರೆಗೆ ಸರಾಸರಿ 60 ರಿಂದ 80 ಟನ್ ಕಬ್ಬಿನ ಇಳುವರಿಯನ್ನು ಕೂಡ. ಈ ರೀತಿ, ಪರ್ಯಾಯ ಕೃಷಿ ಪ್ರಯೋಗಗಳಲ್ಲಿ ಯಶಸ್ಸು ಕಂಡ ರೈತರ ಪದ್ಧತಿಗಳು ಸಮಗ್ರ ಅಧ್ಯಯನವಾಗಿ, ಎಲ್ಲಾ ರೈತರಿಗೂ ಈ ಮಾಹಿತಿ ತಲುಪಬೇಕಾಗಿದೆ. ಜೊತೆಗೆ, ಸಾವಯವ ಕೃಷಿಗೆ ಹೊಸ ಆಯಾಮ ನೀಡುವ ಈ ಕೃಷಿ ಪದ್ಧತಿಯನ್ನು ಮತ್ತಷ್ಟು ಗಟ್ಟಿ ಮಾಡುವತ್ತ ಕೃಷಿ ವಿಶ್ವವಿದ್ಯಾನಿಲಯ ಮತ್ತು ಸರ್ಕಾರಗಳೂ ಮನಸ್ಸು ಮಾಡಬೇಕಾಗಿದೆ.

★ ★ ★

ಇತ್ತೀಚೆಗಿನ ವರ್ಷಗಳಲ್ಲಿ ನವ ಉದಾರೀಕರಣ (Neo liberalism) ನೀತಿಯ ತೀವ್ರ ಒತ್ತಡದಿಂದಾಗಿ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರ ನಿರುದ್ಯೋಗ, ಬಡತನ ಮತ್ತು ಅಸಮಾನತೆ ನಿವಾರಣೆಗಳಂತಹ 'ಸುಖೀ ರಾಷ್ಟ್ರ' (Welfare state)ದ ನಿಲುವಿಗೆ ನಿಧಾನವಾಗಿ ತಿಲಾಂಜಲಿಯಿಡುತ್ತಾ ಬಂದಿರುತ್ತದೆ. ಈ ಪ್ರವೃತ್ತಿಗೆ ರಾಷ್ಟ್ರಪತಿಗಳ ಅಂಕಿತಕ್ಕೆ ಕಾಯುತ್ತಿರುವ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮಸೂದೆ'ಯಿಂದ ಸ್ವಲ್ಪ ತಡೆ ದೊರೆತಂತಾಗಿರುತ್ತದೆ.

★ ★ ★

ಅರಣ್ಯವಾಸಿ ಪರಿಶಿಷ್ಟ ಸಮುದಾಯಗಳ ಬಹುದಿನಗಳ ಬೇಡಿಕೆ ಅರಣ್ಯ ಭೂಮಿ ಮೇಲಿನ ತಮ್ಮ ಒಡೆತನದ ಹಕ್ಕು ಈಡೇರುವ ಕಾಲ ಈಗ ಕೂಡಿ ಬಂದಿದೆ. ಪರಿಶಿಷ್ಟ ಪಂಗಡಗಳ (ಅರಣ್ಯದ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ *2005* ಮಸೂದೆ ರೂಪ ತಳೆಯಲು ಸಜ್ಜಾಗಿ ನಿಂತಿದೆ. ಇದರ ಮೂಲಕ ಮಲೆನಾಡ ಅರಣ್ಯ ಹೊಕ್ಕಿರುವ ನಕ್ಸಲರ ಸಮಸ್ಯೆಗೂ ಸೂಕ್ತ ಪರಿಹಾರ ಸಿಕ್ಕಿ ಅಲ್ಲಿ ಶಾಂತಿ ನೆಲೆಸುವಂತಾಗಲೆಂದು ಹಾರೈಸುತ್ತೇವೆ.

★ ★ ★

ಕಳೆದ ಸಂಚಿಕೆಯಲ್ಲಿ ನಮ್ಮ ಹಾಸನದ ಸಾವಯವ ಕೃಷಿ ಋಷಿ ಬಸವರಾಜು ಸಂತೇಶಿವರರ 'ಬಸವನ ಹುಳು ನಿಯಂತ್ರಣ' ಕ್ರಮ ಒಂದನ್ನು ಕೊಡಲಾಗಿತ್ತು. ಇದರ ಬಗ್ಗೆ ಆಸಕ್ತಿ ತಳೆದು ಸಂಪೂರ್ಣ ವಾಗಿ ತಿಳಿಯಲು ತುಮಕೂರಿನ ಕೋದಂಡರಾಮಯ್ಯ ಮತ್ತವರ ಮಿತ್ರರು ಸಂತೇಶಿವರರ ತೋಟಕ್ಕೆ ಬೇಟಿ ನೀಡಿ, ಅವರ ಮನೆಯಲ್ಲೆ ಮೂರು ದಿನ ಉಳಿದು ಅನುಭವ ಹೀರಿ ಬಂದಿರುವರು. ಈ ಬೆಳವಣಿಗೆಯಿಂದ 'ಹಿತ್ತಲಗಿಡ'ದ ಪ್ರಯತ್ನ ಸ್ವಲ್ಪ ಸಾರ್ಥಕವಾದಂತಾಗಿದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಪರಿಶಿಷ್ಟ ಪಂಗಡಗಳ (ಅರಣ್ಯದ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ 2005

ಅರಣ್ಯವಾಸಿ ಪರಿಶಿಷ್ಟ ಪಂಗಡಗಳು ತಾವು ನೂರಾರು ವರ್ಷಗಳಿಂದ ಬಳಸಿ ಬದುಕುತ್ತಾ ಬಂದಿರುವ ಅರಣ್ಯಭೂಮಿಯ ಮೇಲೆ ತಮ್ಮ ಹಕ್ಕು ಪಡೆಯುವ ಸಮಯ ಈಗ ಕೂಡಿ ಬಂದಿರುತ್ತದೆ. 'ಪರಿಶಿಷ್ಟ ಪಂಗಡಗಳ (ಅರಣ್ಯ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ' [The Scheduled Tribes (Recognition of Forest Rights) Bill], 2005 ಲೋಕಸಭೆಯಲ್ಲಿ ವಿವರವಾದ ಚರ್ಚೆಗೆ ಒಳಗಾಗಿ ಮಸೂದೆ ರೂಪ ಪಡೆಯಲು ಸಜ್ಜಾಗಿದೆ. "ಅರಣ್ಯವಾಸಿ ಸಮುದಾಯಗಳ ಸಹಭಾಗಿತ್ವದಲ್ಲಿ ಮಾತ್ರ ಅರಣ್ಯ ಸಂಪತ್ತಿನ ರಕ್ಷಣೆ ಸಾಧ್ಯ." ಎಂಬ ದೃಢ ನಂಬಿಕೆಯಿಂದ ಹೆಜ್ಜೆ ಇಟ್ಟಿರುವ ಈ ಮಸೂದೆ. ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ಅರಣ್ಯಭೂಮಿಯ ಮೇಲಿನ ಒಡೆತನ ಮತ್ತು ಅರಣ್ಯ ಉತ್ಪನ್ನಗಳ ಬಳಕೆಯ ಹಕ್ಕನ್ನು ನೀಡುವಲ್ಲಿ ಅಗತ್ಯವಿರುವ ಎಲ್ಲಾ ಕಾರ್ಯ ವಿಧಾನಗಳನ್ನು ರೂಪಿಸಲು ಮುಂದಾಗಿದೆ. ಆಯಾ ಪ್ರದೇಶದ ಪಂಚಾಯಿತಿರಾಜ್ ಸಂಸ್ಥೆಗಳ ಗ್ರಾಮಸಭೆಗೆ ಹಕ್ಕು ನೀಡಬೇಕಾಗಿರುವ ಅರಣ್ಯವ್ಯಾಪ್ತಿಯನ್ನು ನಿರ್ಧರಿಸಿ ಕ್ರಮ ಕೈಗೊಳ್ಳಲು ವಿಶೇಷ ಅಧಿಕಾರ ನೀಡಲಾಗಿದೆ. ಗ್ರಾಮಸಭೆಗಳ ತೀರ್ಮಾನವನ್ನು ಪರಿಶೀಲಿಸಲು ಉಪ ವಿಭಾಗ ಮಟ್ಟದ ಒಂದು ಸಮಿತಿಯನ್ನು ನೇಮಿಸಲಾಗುವುದು. ಅರಣ್ಯಭೂಮಿಯ ಮೇಲಿನ ಹಕ್ಕಿನ ಜೊತೆಗೆ, ಅರಣ್ಯ ಸಂಪತ್ತು ಮತ್ತು ಜೀವವಿವಿಧತೆಯ ಬಳಕೆಯ ಹಕ್ಕು ಹಾಗೇ, ಈ ಸಂಪನ್ಮೂಲಗಳ ಜೊತೆಗೆ ಬಳಸುತ್ತಿರುವ ಪಾರಂಪರಿಕ ಜ್ಞಾನದ ಮೇಲಿನ "ಸಮುದಾಯ ಬೌದ್ಧಿಕ ಸನದಿನ (Community Intellectual Property) ಹಕ್ಕು"ಗಳೂ ಸೇರಿದಂತೆ ಸುಮಾರು 13 ವಿಧದ ಹಕ್ಕುಗಳನ್ನು ಈ ಮಸೂದೆ ಮಾನ್ಯ ಮಾಡಿರುತ್ತದೆ. ಈ ಕಾಯಿದೆಯ ಪ್ರಮುಖ ಅಂಶಗಳೆಂದರೆ:

1) ದಿನಾಂಕ 25.10.1980ಕ್ಕಿಂತ ಮೊದಲಿಂದಲೂ ಅರಣ್ಯವಾಸಿಯಾಗಿದ್ದ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಕುಟುಂಬ ಒಂದಕ್ಕೆ ತಲಾ 2.5 ಹೆಕ್ಟೇರ್ (6 ಎಕರೆಗೆ) ಮೀರದ ಅರಣ್ಯ ಭೂಮಿಯ ಒಡೆತನ ದೊರೆಯಲಿದೆ.

2) ಈ ಭೂಮಿಯ ಮೇಲೆ ಕುಟುಂಬದ ಪತಿ ಮತ್ತು ಪತ್ನಿ ಇಬ್ಬರಿಗೂ ಜಂಟಿ ಒಡೆತನವಿರುತ್ತದೆ.

3) ಈ ಕಾಯಿದೆ ಅನುಷ್ಠಾನಕ್ಕೆ ಬರುವವರೆಗೆ, ಯಾವುದೇ ಅರಣ್ಯವಾಸಿ ಪರಿಶಿಷ್ಟ ಕುಟುಂಬವನ್ನು ಒಕ್ಕಲೆಬ್ಬಿಸುವಂತಿಲ್ಲ. ಈ ಭೂಮಿಯನ್ನು ವಂಶಪಾರಂಪರ್ಯವಾಗಿ ಮುಂದಿನ ತಲೆಮಾರಿಗೆ ನೀಡಬಹುದೇ ಹೊರತು ಮಾರಾಟಮಾಡುವ ಅಥವ ಅನ್ಯರಿಗೆ ಹಸ್ತಾಂತರಿಸುವ ಅಧಿಕಾರವಿರುವುದಿಲ್ಲ.

4) ಕಿರು ಅರಣ್ಯ ಉತ್ಪನ್ನವೂ ಸೇರಿದಂತೆ, ಈ ಅರಣ್ಯಭೂಮಿ, ಅದಕ್ಕೆ ಹೊಂದಿಕೊಂಡ ಸಂಪನ್ಮೂಲಗಳನ್ನು ನ್ಯಾಯಯುತ ಜೀವನಾವಶ್ಯಕ ಉದ್ದೇಶಗಳಿಗೆ ಮಾತ್ರ ಬಳಸಬೇಕೇ ಹೊರತು ವಾಣಿಜ್ಯ ಉದ್ದೇಶಗಳಿಗಲ್ಲ.

5) ಜೊತೆಗೆ, ಈ ರೀತಿ ಹಕ್ಕು ಪಡೆದ ಭೂಮಿಯ ವ್ಯಾಪ್ತಿಯೊಳಗಿರುವ ವನ್ಯಮೃಗ ಜೀವವಿವಿಧತೆ, ಅರಣ್ಯ ಸಂಪತ್ತನ್ನು ಉಳಿಸಿ ಬೆಳಸುವ ಗುರುತರ ಹೊಣೆಗಾರಿಕೆ ಕೂಡ ಈ ಹಕ್ಕು ಪಡೆದ ಕುಟುಂಬಗಳ ಮೇಲಿರುತ್ತದೆ. ಅಲ್ಲಿ ಸ್ವಾಭಾವಿಕವಾಗಿ ಬೆಳೆದ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಲು ಅವಕಾಶವಿರುವುದಿಲ್ಲ.

6) ಈ ಜವಾಬ್ದಾರಿಗಳನ್ನು ಉಲ್ಲಂಘಿಸಿದ ಕುಟುಂಬಕ್ಕೆ ಒಂದು ಸಾವಿರ ರೂಪಾಯಿ ದಂಡ ಹಾಕಲಾಗುವುದು. ಇದು ಮತ್ತೊಮ್ಮೆ ಮರುಕಳಿಸಿದಲ್ಲಿ ಗ್ರಾಮಸಭೆಯ ಶಿಫಾರಿಸ್ಸಿನ ಮೇರೆಗೆ ಆ ಅರಣ್ಯಭೂಮಿಯ ಮೇಲೆ ನೀಡಿದ ಹಕ್ಕನ್ನೇ ಅಸಿಂಧುಗೊಳಿಸುವ ಕ್ರಮಕ್ಕೂ ಅವಕಾಶ ಕಲ್ಪಿಸಲಾಗಿದೆ.

7) ಹಾಗೇ, ಈ ಮಸೂದೆಯ ಅನುಷ್ಠಾನದಲ್ಲಿ ಯಾವುದೇ ನಿಯಮವನ್ನು ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧವೂ 30 ದಿನಗಳ ಸಜೆ ಅಥವಾ 5000 ರೂ. ದಂಡ ಅಥವಾ ಎರಡನ್ನೂ ವಿಧಿಸುವ ಅವಕಾಶ ಕಲ್ಪಿಸಲಾಗಿದೆ.

ಇಂತಹಾ ಐತಿಹಾಸಿಕ ಮಸೂದೆಯ ಪರ ಮತ್ತು ವಿರೋಧವಾಗಿಯೂ ತೀವ್ರವಾದ ಅಭಿಪ್ರಾಯಗಳೇಳುತ್ತಿವೆ. ಮಾನವ ಹಕ್ಕಿನ ಪರ ಹೋರಾಡುತ್ತಿರುವವರು ಈ ಮಸೂದೆಯನ್ನು ಸ್ವಾಗತಿಸಿ, ಇದನ್ನು ಬರಿದೇ ಅರಣ್ಯವಾಸಿಗಳಿಗಲ್ಲದೆ ಎಲ್ಲಾ ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಲು ಒತ್ತಡ ಹೇರುತ್ತಿರುವರು. ಆದರೆ ಪರಿಸರವಾದಿಗಳು ಈ ಮಸೂದೆಯಿಂದ ಅರಣ್ಯ ಮತ್ತು ಪರಿಸರ ನಾಶವಾಗಲಿದೆ ಹಾಗೆ ವನ್ಯಜೀವಿಗಳಿಗೆ ಆಪತ್ತು ಒದಗಲಿದೆ ಎಂಬ ವಾದವನ್ನು ಮುಂದೊಡ್ಡಿ ವಿರೋಧಿಸುತ್ತಲಿರುವರು. ಜೊತೆಗೆ, ಈ ಕಾಯಿದೆಯಿಂದ ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆ ವಿಚಾರಗಳಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹಾಗೇ ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದ ಮಂತ್ರಾಲಯಗಳ ನಡುವೆ ತಿಕ್ಕಾಟ ಉಂಟಾಗಲಿದೆ ಎನ್ನುವ ಸಂಶಯವನ್ನೂ ವ್ಯಕ್ತಪಡಿಸಲಾಗಿದೆ.

ಅರಣ್ಯ ಸಂರಕ್ಷಣೆಯ ಮೂಲ ಉದ್ದೇಶ ಬರಿದೇ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿ, ನಗರ ಪ್ರದೇಶದ ಜನರಿಗೆ ಅಗತ್ಯ ವಸ್ತುಗಳನ್ನು ನೀಡುವುದಲ್ಲ, ಅರಣ್ಯದೊಳಗೆ ಪರಿಸರ, ವನ್ಯ ಜೀವಿಗಳ ಸಹಭಾಗಿತ್ವದಲ್ಲಿ ಶತಶತಮಾನಗಳಿಂದ ಬದುಕುತ್ತಾ ಬಂದಿರುವ ಈ ಬುಡಕಟ್ಟು ಸಮುದಾಯಗಳ ಜೀವನ ಭದ್ರತೆ ಅಂಶ ಇಲ್ಲಿ ಪ್ರಮುಖವಾಗಿರುತ್ತದೆ. ದೇಶದ ಜನಸಂಖ್ಯೆಯಲ್ಲಿ ಗಮನಾರ್ಹ ಪ್ರಮಾಣದಲ್ಲಿರುವ ಈ ಸಮುದಾಯಗಳು ಸ್ವಾತಂತ್ರ ಹೋರಾಟದಲ್ಲೂ, ಗಾಂಧೀಜಿಯ ಐತಿಹಾಸಿಕ ಚಂಪಾರಣ್ಯ ಚಳುವಳಿಯಿಂದ ಬ್ರಿಟೀಷರ ವಿರುದ್ಧದ ಅಂಡಮಾನ್ ಬುಡಕಟ್ಟು ಜನರ ಹೋರಾಟಗಳವರೆಗೆ ಪ್ರಮುಖ ಪಾತ್ರವಹಿಸಿರುತ್ತವೆ. ವಿಪರ್ಯಾಸವೆಂದರೆ, ಸ್ವಾತಂತ್ರ ಪಡೆದ 58 ವರ್ಷಗಳ ನಂತರವೂ, ಈ ಸಮುದಾಯಗಳ ಜೀವನ ಭದ್ರತೆಗೆ ಆಧಾರವಾಗಿರುವ ಅರಣ್ಯ ಭೂಮಿಗಳ ಮೇಲಿನ ಒಡೆತನದ ವಿಚಾರವನ್ನು ಸದಾ ಕಡೆಗಣಿಸುತ್ತಾ ಬಂದಿರುವುದು. ಈ ಲೋಪವನ್ನು ಸರಿ ಮಾಡುವತ್ತ ಇಟ್ಟಿರುವ ದಿಟ್ಟ ಹೆಜ್ಜೆ ಈ 2005ರ ಮಸೂದೆಯಾಗಿರುತ್ತದೆ.

ಬರಿದೇ ಅರಣ್ಯದ ಮೇಲಿನ ಹಕ್ಕು ಮಾತ್ರವಲ್ಲ ಅದನ್ನು ಸಂರಕ್ಷಿಸಿ ಸುಸ್ಥಿರ ರೀತಿಯಲ್ಲಿ ಬಳಸುವಂತೆ ಜವಾಬ್ದಾರಿಯನ್ನೂ ಕೂಡ ಗಟ್ಟಿ ಮಾಡಿ, ಈ ಅರಣ್ಯವಾಸಿ ಸಮುದಾಯಕ್ಕೆ "ಪರಿಸರ ಮುಂದಾಳತ್ವ" (Environmental Stewardship) ನೀಡಿದಾಗ ಮಾತ್ರ ಈ ಮಸೂದೆಗೆ ಅರ್ಥ ಬರುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಕಾನೂನು ಶಾಲೆಯ ಪರಿಸರ ತಜ್ಞರಾದ ಪ್ರೊ. ಎಂ.ಕೆ. ರಮೇಶ್‌ರವರು.

ಪರಿಶಿಷ್ಟ ಪಂಗಡಗಳ (ಅರಣ್ಯದ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ 2005

ಅರಣ್ಯವಾಸಿ ಪರಿಶಿಷ್ಟ ಪಂಗಡಗಳು ತಾವು ನೂರಾರು ವರ್ಷಗಳಿಂದ ಬಳಸಿ ಬದುಕುತ್ತಾ ಬಂದಿರುವ ಅರಣ್ಯಭೂಮಿಯ ಮೇಲೆ ತಮ್ಮ ಹಕ್ಕು ಪಡೆಯುವ ಸಮಯ ಈಗ ಕೂಡಿ ಬಂದಿರುತ್ತದೆ. 'ಪರಿಶಿಷ್ಟ ಪಂಗಡಗಳ (ಅರಣ್ಯ ಮೇಲಿನ ಹಕ್ಕಿನ ಪರಿಗಣನೆ) ಕಾಯಿದೆ' [The Scheduled Tribes (Recognition of Forest Rights) Bill], 2005 ಲೋಕಸಭೆಯಲ್ಲಿ ವಿವರವಾದ ಚರ್ಚೆಗೆ ಒಳಗಾಗಿ ಮಸೂದೆ ರೂಪ ಪಡೆಯಲು ಸಜ್ಜಾಗಿದೆ. "ಅರಣ್ಯವಾಸಿ ಸಮುದಾಯಗಳ ಸಹಭಾಗಿತ್ವದಲ್ಲಿ ಮಾತ್ರ ಅರಣ್ಯ ಸಂಪತ್ತಿನ ರಕ್ಷಣೆ ಸಾಧ್ಯ." ಎಂಬ ದೃಢ ನಂಬಿಕೆಯಿಂದ ಹೆಜ್ಜೆ ಇಟ್ಟಿರುವ ಈ ಮಸೂದೆ. ಅರಣ್ಯವಾಸಿ ಬುಡಕಟ್ಟು ಸಮುದಾಯಗಳಿಗೆ ಅರಣ್ಯಭೂಮಿಯ ಮೇಲಿನ ಒಡೆತನ ಮತ್ತು ಅರಣ್ಯ ಉತ್ಪನ್ನಗಳ ಬಳಕೆಯ ಹಕ್ಕನ್ನು ನೀಡುವಲ್ಲಿ ಅಗತ್ಯವಿರುವ ಎಲ್ಲಾ ಕಾರ್ಯ ವಿಧಾನಗಳನ್ನು ರೂಪಿಸಲು ಮುಂದಾಗಿದೆ. ಆಯಾ ಪ್ರದೇಶದ ಪಂಚಾಯ್ತಿರಾಜ್ ಸಂಸ್ಥೆಗಳ ಗ್ರಾಮಸಭೆಗೆ ಹಕ್ಕು ನೀಡಬೇಕಾಗಿರುವ ಅರಣ್ಯವ್ಯಾಪ್ತಿಯನ್ನು ನಿರ್ಧರಿಸಿ ಕ್ರಮ ಕೈಗೊಳ್ಳಲು ವಿಶೇಷ ಅಧಿಕಾರ ನೀಡಲಾಗಿದೆ. ಗ್ರಾಮಸಭೆಗಳ ತೀರ್ಮಾನವನ್ನು ಪರಿಶೀಲಿಸಲು ಉಪ ವಿಭಾಗ ಮಟ್ಟದ ಒಂದು ಸಮಿತಿಯನ್ನು ನೇಮಿಸಲಾಗುವುದು. ಅರಣ್ಯಭೂಮಿಯ ಮೇಲಿನ ಹಕ್ಕಿನ ಜೊತೆಗೆ, ಅರಣ್ಯ ಸಂಪತ್ತು ಮತ್ತು ಜೀವವಿವಿಧತೆಯ ಬಳಕೆಯ ಹಕ್ಕು ಹಾಗೇ, ಈ ಸಂಪನ್ಮೂಲಗಳ ಜೊತೆಗೆ ಬಳಸುತ್ತಿರುವ ಪಾರಂಪರಿಕ ಜ್ಞಾನದ ಮೇಲಿನ "ಸಮುದಾಯ ಬೌದ್ಧಿಕ ಸನದಿನ (Community Intellectual Property) ಹಕ್ಕು"ಗಳೂ ಸೇರಿದಂತೆ ಸುಮಾರು 13 ವಿಧದ ಹಕ್ಕುಗಳನ್ನು ಈ ಮಸೂದೆ ಮಾನ್ಯ ಮಾಡಿರುತ್ತದೆ. ಈ ಕಾಯಿದೆಯ ಪ್ರಮುಖ ಅಂಶಗಳೆಂದರೆ:

1) ದಿನಾಂಕ 25.10.1980ಕ್ಕಿಂತ ಮೊದಲಿಂದಲೂ ಅರಣ್ಯವಾಸಿಯಾಗಿದ್ದ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಕುಟುಂಬ ಒಂದಕ್ಕೆ ತಲಾ 2.5 ಹೆಕ್ಟೇರ್ (6 ಎಕರೆಗೆ) ಮೀರದ ಅರಣ್ಯ ಭೂಮಿಯ ಒಡೆತನ ದೊರೆಯಲಿದೆ.

2) ಈ ಭೂಮಿಯ ಮೇಲೆ ಕುಟುಂಬದ ಪತಿ ಮತ್ತು ಪತ್ನಿ ಇಬ್ಬರಿಗೂ ಜಂಟಿ ಒಡೆತನವಿರುತ್ತದೆ.

3) ಈ ಕಾಯಿದೆ ಅನುಷ್ಠಾನಕ್ಕೆ ಬರುವವರೆಗೆ, ಯಾವುದೇ ಅರಣ್ಯವಾಸಿ ಪರಿಶಿಷ್ಟ ಕುಟುಂಬವನ್ನು ಒಕ್ಕಲೆಬ್ಬಿಸುವಂತಿಲ್ಲ. ಈ ಭೂಮಿಯನ್ನು ವಂಶಪಾರಂಪರ್ಯವಾಗಿ ಮುಂದಿನ ತಲೆ ಮಾರಿಗೆ ನೀಡಬಹುದೇ ಹೊರತು ಮಾರಾಟಮಾಡುವ ಅಥವ ಅನ್ಯರಿಗೆ ಹಸ್ತಾಂತರಿಸುವ ಅಧಿಕಾರವಿರುವುದಿಲ್ಲ.

4) ಕಿರು ಅರಣ್ಯ ಉತ್ಪನ್ನವೂ ಸೇರಿದಂತೆ, ಈ ಅರಣ್ಯಭೂಮಿ, ಅದಕ್ಕೆ ಹೊಂದಿಕೊಂಡ ಸಂಪನ್ಮೂಲಗಳನ್ನು ನ್ಯಾಯಯುತ ಜೀವನಾವಶ್ಯಕ ಉದ್ದೇಶಗಳಿಗೆ ಮಾತ್ರ ಬಳಸಬೇಕೇ ಹೊರತು ವಾಣಿಜ್ಯ ಉದ್ದೇಶಗಳಿಗಲ್ಲ.

5) ಜೊತೆಗೆ, ಈ ರೀತಿ ಹಕ್ಕು ಪಡೆದ ಭೂಮಿಯ ವ್ಯಾಪ್ತಿಯೊಳಗಿರುವ ವನ್ಯಮೃಗ ಜೀವವಿವಿಧತೆ, ಅರಣ್ಯ ಸಂಪತ್ತನ್ನು ಉಳಿಸಿ ಬೆಳಸುವ ಗುರುತರ ಹೊಣೆಗಾರಿಕೆ ಕೂಡ ಈ ಹಕ್ಕು ಪಡೆದ ಕುಟುಂಬಗಳ ಮೇಲಿರುತ್ತದೆ. ಅಲ್ಲಿ ಸ್ವಾಭಾವಿಕವಾಗಿ ಬೆಳೆದ ಮರಗಳನ್ನು ಯಾವುದೇ ಕಾರಣಕ್ಕೂ ಕಡಿಯಲು ಅವಕಾಶವಿರುವುದಿಲ್ಲ.

6) ಈ ಜವಾಬ್ದಾರಿಗಳನ್ನು ಉಲ್ಲಂಘಿಸಿದ ಕುಟುಂಬಕ್ಕೆ ಒಂದು ಸಾವಿರ ರೂಪಾಯಿ ದಂಡ ಹಾಕಲಾಗುವುದು. ಇದು ಮತ್ತೊಮ್ಮೆ ಮರುಕಳಿಸಿದಲ್ಲಿ ಗ್ರಾಮಸಭೆಯ ಶಿಫಾರಿಸ್ಸಿನ ಮೇರೆಗೆ ಆ ಅರಣ್ಯಭೂಮಿಯ ಮೇಲೆ ನೀಡಿದ ಹಕ್ಕನ್ನೇ ಅಸಿಂಧುಗೊಳಿಸುವ ಕ್ರಮಕ್ಕೂ ಅವಕಾಶ ಕಲ್ಪಿಸಲಾಗಿದೆ.

7) ಹಾಗೇ, ಈ ಮಸೂದೆಯ ಅನುಷ್ಠಾನದಲ್ಲಿ ಯಾವುದೇ ನಿಯಮವನ್ನು ಉಲ್ಲಂಘಿಸುವ ಅಧಿಕಾರಿಗಳ ವಿರುದ್ಧವೂ 30 ದಿನಗಳ ಸಜೆ ಅಥವಾ 5000 ರೂ. ದಂಡ ಅಥವಾ ಎರಡನ್ನೂ ವಿಧಿಸುವ ಅವಕಾಶ ಕಲ್ಪಿಸಲಾಗಿದೆ.

ಇಂತಹಾ ಐತಿಹಾಸಿಕ ಮಸೂದೆಯ ಪರ ಮತ್ತು ವಿರೋಧವಾಗಿಯೂ ತೀವ್ರವಾದ ಅಭಿಪ್ರಾಯಗಳೇಳುತ್ತಿವೆ. ಮಾನವ ಹಕ್ಕಿನ ಪರ ಹೋರಾಡುತ್ತಿರುವವರು ಈ ಮಸೂದೆಯನ್ನು ಸ್ವಾಗತಿಸಿ, ಇದನ್ನು ಬರಿದೇ ಅರಣ್ಯವಾಸಿಗಳಿಗಲ್ಲದೆ ಎಲ್ಲಾ ಪರಿಶಿಷ್ಟ ಪಂಗಡಗಳಿಗೂ ವಿಸ್ತರಿಸಲು ಒತ್ತಡ ಹೇರುತ್ತಿರುವರು. ಆದರೆ ಪರಿಸರವಾದಿಗಳು ಈ ಮಸೂದೆಯಿಂದ ಅರಣ್ಯ ಮತ್ತು ಪರಿಸರ ನಾಶವಾಗಲಿದೆ ಹಾಗೆ ವನ್ಯಜೀವಿಗಳಿಗೆ ಆಪತ್ತು ಒದಗಲಿದೆ ಎಂಬ ವಾದವನ್ನು ಮುಂದೊಡ್ಡಿ ವಿರೋಧಿಸುತ್ತಲಿರುವರು. ಜೊತೆಗೆ, ಈ ಕಾಯಿದೆಯಿಂದ ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆ ವಿಚಾರಗಳಲ್ಲಿ ಪರಿಸರ ಮತ್ತು ಅರಣ್ಯ ಮಂತ್ರಾಲಯ ಹಾಗೇ ಪರಿಶಿಷ್ಟ ವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದ ಮಂತ್ರಾಲಯಗಳ ನಡುವೆ ತಿಕ್ಕಾಟ ಉಂಟಾಗಲಿದೆ ಎನ್ನುವ ಸಂಶಯವನ್ನೂ ವ್ಯಕ್ತಪಡಿಸಲಾಗಿದೆ.

ಅರಣ್ಯ ಸಂರಕ್ಷಣೆಯ ಮೂಲ ಉದ್ದೇಶ ಬರಿದೇ ಕೈಗಾರಿಕೆಗಳಿಗೆ ಕಚ್ಚಾ ಸಾಮಗ್ರಿ, ನಗರ ಪ್ರದೇಶದ ಜನರಿಗೆ ಅಗತ್ಯ ವಸ್ತುಗಳನ್ನು ನೀಡುವುದಲ್ಲ, ಅರಣ್ಯದೊಳಗೆ ಪರಿಸರ, ವನ್ಯ ಜೀವಿಗಳ ಸಹಭಾಗಿತ್ವದಲ್ಲಿ ಶತಶತಮಾನಗಳಿಂದ ಬದುಕುತ್ತಾ ಬಂದಿರುವ ಈ ಬುಡಕಟ್ಟು ಸಮುದಾಯಗಳ ಜೀವನ ಭದ್ರತೆ ಅಂಶ ಇಲ್ಲಿ ಪ್ರಮುಖವಾಗಿರುತ್ತದೆ. ದೇಶದ ಜನಸಂಖ್ಯೆಯಲ್ಲಿ ಗಮನಾರ್ಹ ಪ್ರಮಾಣದಲ್ಲಿರುವ ಈ ಸಮುದಾಯಗಳು ಸ್ವಾತಂತ್ರ ಹೋರಾಟದಲ್ಲೂ, ಗಾಂಧೀಜಿಯ ಐತಿಹಾಸಿಕ ಚಂಪಾರಣ್ಯ ಚಳುವಳಿಯಿಂದ ಬ್ರಿಟೀಷರ ವಿರುದ್ಧದ ಅಂಡಮಾನ್ ಬುಡಕಟ್ಟು ಜನರ ಹೋರಾಟಗಳವರೆಗೆ ಪ್ರಮುಖ ಪಾತ್ರವಹಿಸಿರುತ್ತವೆ. ವಿಪರ್ಯಾಸವೆಂದರೆ, ಸ್ವಾತಂತ್ರ ಪಡೆದ 58 ವರ್ಷಗಳ ನಂತರವೂ, ಈ ಸಮುದಾಯಗಳ ಜೀವನ ಭದ್ರತೆಗೆ ಆಧಾರವಾಗಿರುವ ಅರಣ್ಯ ಭೂಮಿಗಳ ಮೇಲಿನ ಒಡೆತನದ ವಿಚಾರವನ್ನು ಸದಾ ಕಡೆಗಣಿಸುತ್ತಾ ಬಂದಿರುವುದು. ಈ ಲೋಪವನ್ನು ಸರಿ ಮಾಡುವತ್ತ ಇಟ್ಟಿರುವ ದಿಟ್ಟ ಹೆಜ್ಜೆ ಈ 2005ರ ಮಸೂದೆಯಾಗಿರುತ್ತದೆ.

ಬರಿದೇ ಅರಣ್ಯದ ಮೇಲಿನ ಹಕ್ಕು ಮಾತ್ರವಲ್ಲ ಅದನ್ನು ಸಂರಕ್ಷಿಸಿ ಸುಸ್ಥಿರ ರೀತಿಯಲ್ಲಿ ಬಳಸುವಂತೆ ಜವಾಬ್ದಾರಿಯನ್ನೂ ಕೂಡ ಗಟ್ಟಿ ಮಾಡಿ, ಈ ಅರಣ್ಯವಾಸಿ ಸಮುದಾಯಕ್ಕೆ "ಪರಿಸರ ಮುಂದಾಳತ್ವ" (Environmental Stewardship) ನೀಡಿದಾಗ ಮಾತ್ರ ಈ ಮಸೂದೆಗೆ ಅರ್ಥ ಬರುತ್ತದೆ ಎನ್ನುತ್ತಾರೆ ರಾಷ್ಟ್ರೀಯ ಕಾನೂನು ಶಾಲೆಯ ಪರಿಸರ ತಜ್ಞರಾದ ಪ್ರೊ. ಎಂ.ಕೆ. ರಮೇಶ್‌ರವರು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಮಸೂದೆ

ಕಳೆದ ಆಗಸ್ಟ್‌ನಲ್ಲಿ ಲೋಕಸಭೆ ಮತ್ತು ರಾಜ್ಯ ಸಭೆಗಳೆರಡರಲ್ಲೂ ವಿವರವಾದ ಚರ್ಚೆ ನಂತರ ಹೊರಬಂದಿರುವ ಅತ್ಯಂತ ಮಹತ್ವದ ಈ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ' (National Rural Employment Guarantee) Bill ರಾಷ್ಟ್ರಪತಿಗಳ ಅಂಕಿತಕ್ಕೆ ಕಾಯುತ್ತಿದೆ. ಈ ಕಾಯಿದೆ ಮಸೂದೆ ರೂಪ ತಳೆದಿದ್ದೇ ಆದಲ್ಲಿ ಇದು ಗ್ರಾಮೀಣ ಭಾರತದ ಬಡತನ ನಿವಾರಣೆಯಲ್ಲಿ ಇಟ್ಟ ಒಂದು ದೃಢ ಹೆಜ್ಜೆಯಾಗುವುದರಲ್ಲಿ ಸಂಶಯವಿರದು.

ಈ ಕಾಯಿದೆ ಪ್ರಕಾರ, ಗ್ರಾಮೀಣ ಭಾರತದ 200 ಜಿಲ್ಲೆಗಳಲ್ಲಿ ಪ್ರತಿ ಬಡಕುಟುಂಬದ ಕನಿಷ್ಠ ಓರ್ವ ವ್ಯಕ್ತಿಗೆ ವರ್ಷದಲ್ಲಿ 60 ರೂ. ದಿನಗೂಲಿಯಂತೆ, 100 ದಿನಗಳ ಉದ್ಯೋಗದ ಖಾತರಿ ಇರುತ್ತದೆ. ದಿನಗೂಲಿ ರೂ. 60 ಕ್ಕಿಂತ ಕಡಿಮೆ ಇರುವ ರಾಜ್ಯಕ್ಕೆ, ಹೆಚ್ಚುವರಿ ಹಣವನ್ನು ಕೇಂದ್ರ ಸರ್ಕಾರ ಭರಿಸುವುದು. ಇದಕ್ಕಿಂತ ಅಧಿಕವಿರುವ ಪ್ರದೇಶಗಳಲ್ಲಿ ಕೊರತೆ ಹಣವನ್ನು ಆಯಾ ರಾಜ್ಯಗಳೇ ಹೊಂದಿಸಿಕೊಳ್ಳಬೇಕು. ಇನ್ನೈದು ವರ್ಷಗಳಲ್ಲಿ ಈ ಕಾರ್ಯಕ್ರಮ ಇಡೀ ದೇಶಕ್ಕೆ ವ್ಯಾಪಿಸಲಿದೆ.

ಕೆಲಸವನ್ನು ಕೇಳಿ ಬಂದ ಅರ್ಹ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸಿ ಕೂಲಿ ನೀಡುವ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮಪಂಚಾಯ್ತಿಗಳಿಗೆ ನೀಡಲಾಗಿದೆ. ಇದು ಸ್ಥಳೀಯ ಸಂಸ್ಥೆಗಳನ್ನು ಸಬಲೀಕರಿಸುವಲ್ಲಿ ಇಟ್ಟ ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ತಕ್ಷಣ ಕೆಲಸ ನೀಡುವುದು ಅಸಾಧ್ಯವಾದಲ್ಲಿ ಉದ್ಯೋಗ ಕೇಳಿ ಬಂದ ವ್ಯಕ್ತಿಗಳಿಗೆ ನಿಗದಿತ ದಿನಗೂಲಿಯಲ್ಲಿ ಮೂರನೇ ಒಂದರಷ್ಟು ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ. ಈ ಯೋಜನೆಯ ಕಾರ್ಯ ಮುಕ್ತವಾಗಿದ್ದು, ಇದರ ಫಲಾನುಭವಿಗಳಪಟ್ಟಿ, ಮಾಡುವ ವೆಚ್ಚ ಇತ್ಯಾದಿ ವಿವರಗಳು ಸಾರ್ವಜನಿಕರಿಗೆ ದೊರಕುವಂತೆ ಮಾಡಲು, ಈಗಾಗಲೇ ಜಾರಿಗೊಳಿಸಿರುವ 'ಮಾಹಿತಿ ಹಕ್ಕು ಮಸೂದೆ' (Right of Information Act) ರೀತ್ಯ 9 ಹಂತಗಳಲ್ಲಿ ಪಾರದರ್ಶಕತ್ವದ ತಡೆ ಇಲ್ಲಿ ಹಾಕಲಾಗಿದೆ. ಇಷ್ಟಾದರೂ, ಈ ಬೃಹತ್ ಯೋಜನೆಗೆ ಅಗತ್ಯವಿರುವ ಸಹಸ್ರಾರು ಕೋಟಿ ರೂಪಾಯಿ ಹಣ ಎಲ್ಲಿಂದ ಬರಬೇಕು, ಹಣ ಬಂದರೂ, ಇದು ಸದುಪಯೋಗ ಮಾಡುವ ರೀತಿಯ ಬಗ್ಗೆ ಆತಂಕ, ಅನುಮಾನಗಳೇಳುವಂತೆ ಮಾಡಿವೆ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಐಕ್ಯ ಪ್ರಗತಿಪರ ರಂಗ (United Progressive Alliance)ದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಒಂದಂಶವಾಗಿದ್ದರೂ, ಇದನ್ನು ಕಡೆಗಣಿಸುವ ಎಲ್ಲಾ ಹುನ್ನಾರಗಳು ನಡೆದವು . ಈ ಕಾಯಿದೆ ಮಸೂದೆ ರೂಪ ತಳೆಯುವಲ್ಲಿ ಹಲವಾರು ಸ್ವಯಂ ಸೇವಾ ಸಂಸ್ಥೆಗಳು, ಜನಪರ ಸಂಘಟನೆಗಳು ಮತ್ತು ಪ್ರಗತಿಪರ ವ್ಯಕ್ತಿಗಳು ನಡೆಸಿದ ಹೋರಾಟ, ಹಾಗೇ ಎಡಪಕ್ಷಗಳು ಲೋಕ ಸಭೆಯೊಳಗೆ ಹಾಕಿದ ನಿರಂತರ ಒತ್ತಡ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. ಈ ಮಹತ್ವದ ಯೋಜನೆ ಯಶಸ್ವಿ ಯಾಗುವಂತೆ ಮಾಡಲು ಈ ಹೋರಾಟ, ಒತ್ತಡಗಳು ಮುಂದು ವರೆಯಬೇಕಾಗಿದೆ. ಹೀಗೆ, ಹಳ್ಳಿಹಳ್ಳಿಗಳಲ್ಲಿ ಅರಣ್ಯ, ನೆಲ, ಜಲ ಮತ್ತು ಪರಿಸರ ಸಂರಕ್ಷಣೆಯಿಂದ ಕೆರೆ, ಕಾಲುವೆ, ಗೋಮಾಳ, ಗುಂಡುತೋಪು ಇತ್ಯಾದಿ 'ಸಾರ್ವತ್ರಿಕ ಸಂಪನ್ಮೂಲ' (Common Pool Resource)ಗಳ ಪುನರುಜ್ಜೀವನದವರೆಗೆ ಸದೃಢ ಗ್ರಾಮೀಣ ಭಾರತದ ನಿರ್ಮಾಣ ಕಾರ್ಯದಲ್ಲಿ ಸಮರೋಪಾದಿಯಲ್ಲಿ ತೊಡಗಲು ಈ ಕಾಯಿದೆ ಅನುವು ಮಾಡಿ ಕೊಡಬೇಕಾಗಿದೆ.

ಎ.ಪಿ. ಚಂದ್ರಶೇಖರ್‌ರ ಸಾವಯವ ''ಆಯುರ್ವೇದ '' ಬೆಲ್ಲ

ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಸಿಹಿಯ ಮೂಲವಾಗಿ ಬೆಲ್ಲವನ್ನೆ ಹೆಚ್ಚಾಗಿ ಬಳಸುವುದುಂಟು. ಬೆಲ್ಲ ತಯಾರಿಕೆಯಲ್ಲಿ ರಾಸಾಯನಿಕಗಳ ಬಳಕೆ ಹೆಚ್ಚು. ಬೆಲ್ಲವನ್ನು ಬಿಳಿಯಾಗಿಸಲು 'ಹೈಡ್ರಸ್' (ಸೋಡಿಯಂ ಹೈಡ್ರೋಸಲ್ಫೈಡ್) ಎಂಬ ರಾಸಾಯನಿಕವನ್ನು, ಕಬ್ಬಿನ ಹಾಲು ಕುದಿಯುವಾಗ ಉಕ್ಕುವುದನ್ನು ತಡೆಯಲು ಪೊಟ್ಯಾಷ್ ಅಥವಾ ಒಲೆಯಲ್ಲಿನ ಬೂದಿಯನ್ನು, ಬೆಲ್ಲವನ್ನು ಹೆಚ್ಚು ದಿನ ಕೆಡದಂತೆ ಇಡಲು ಅಡುಗೆ ಸೋಡ ಅಲ್ಲದೆ ಗಂ, ಯೂರಿಯಾ, ಜಿಪ್ಸಂ, ಸುಣ್ಣ, ಬ್ಲೀಚಿಂಗ್ ಪೌಡರ್, ನಿರ್ಮಾಪೌಡರ್, ಸಿಮೆಂಟ್, ಗಂಧಕ ಟ್ರೈ ಸೋಡಿಯಂ ಪಾಸ್ಫೇಟ್, ಸಗಣಿ ಮುಂತಾದ ವಸ್ತುಗಳನ್ನು ಬಳಸುವುದಾಗಿ ತಿಳಿದು ಬಂದಿರುತ್ತದೆ. ಆದರೆ, ಮೈಸೂರು ಸಮೀಪದ ನಮ್ಮ ಸಾವಯವ ಕೃಷಿಕರಾದ ಎ.ಪಿ. ಚಂದ್ರಶೇಖರ್‌ರವರು ಇದಾವುದನ್ನೂ ಬಳಸದೆ ಪರಿಶುದ್ಧವಾದ ಸಾವಯವ ಕಪ್ಪು ಬೆಲ್ಲವನ್ನು ಮೂರು ರೀತಿಯಲ್ಲಿ ತಯಾರಿಸುತ್ತಾರೆ. ಅವು ಜ್ಯಾಂ (ಜೋನಿ ಬೆಲ್ಲ), ಅಚ್ಚು ಬೆಲ್ಲ ಮತ್ತು ಪುಡಿ ಬೆಲ್ಲ. ಹಾಗೇ ಈ ಎಲ್ಲ ಬೆಲ್ಲಗಳ ತಯಾರಿಕೆಯಲ್ಲಿ ಔಷಧೀಯ ಸಸ್ಯ ಬಳಸುತ್ತಿರುವುದರಿಂದ ಇವುಗಳಲ್ಲಿ ಆಯುರ್ವೇದದ ಗುಣವಿರುವುದಾಗಿಯೂ ಎ.ಪಿ. ಚಂದ್ರಶೇಖರ್‌ರವರು ಹೇಳುತ್ತಾರೆ.

ಚಂದ್ರಶೇಖರ್ ಬೆಲ್ಲ ತಯಾರಿಕೆಯಲ್ಲಿ ಯಾವುದೇ ರಾಸಾಯನಿಕ ಬಳಸಿಲ್ಲ. ಇವರು 20 ಗಿಡಮೂಲಿಕೆಗಳಾದ ಶುಂಠಿ, ಮೆಣಸು, ಹಿಪ್ಪಲಿ *(Pinus longum)*, ಕೊನ್ನಾರಿ, ಏಲಕ್ಕಿ, ದಾಲ್ಚಿನ್ನಿ, ಲವಂಗ, ಜಾಯಿಕಾಯಿ, ರಂಗುಮಾಲಿ *(Bixa orellana)*, ಸರ್ವಸಾಂಬರು, ಶತಾವರಿ *(Asparagus racemosus)*, ಬಾಸುಮತಿ, ಪುದಿನಾ, ಮಜ್ಜಿಗೆ ಹುಲ್ಲು, ತುಳಸಿ, ಕರಿಬೇವು, ಪೆಪ್ಪರ್‌ಮಿಂಟ್, ವೆನಿಲ್ಲಾ, ಎಳ್ಳು, ಬೇಲ, ಶ್ರೀಗಂಧ, ವೀಳ್ಯದ ಎಲೆ ಮುಂತಾದವುಗಳನ್ನು ಹಾಕಿ ಪಾಕ ತೆಗೆದು ಆಯುರ್ವೇದ ಬೆಲ್ಲವನ್ನು ತಯಾರಿಸುತ್ತಾರೆ. ಅದನ್ನು ಜ್ಯಾಂ ಅಥವಾ ಟಾನಿಕ್ ರೀತಿಯಲ್ಲಿ ಬಳಸಬಹುದಾಗಿದ್ದು ಇದಕ್ಕಾಗಿ ಸಣ್ಣ ಮಾರುಕಟ್ಟೆಯನ್ನು ಸಹ ನಿರ್ಮಿಸಿಕೊಂಡಿರುವ ಅವರು ತಿಂಗಳಿಗೊಮ್ಮೆ 300 ಕಿಲೋ ಕಬ್ಬನ್ನು ಬೆಲ್ಲವಾಗಿಸುವ ಕಾರ್ಯ ಸಾಗಿಸುತ್ತಿರುವರು. ಇದಕ್ಕಾಗಿ 1.5 ಲಕ್ಷ ರೂ. ವೆಚ್ಚ ಮಾಡಿ ದೊಡ್ಡ ಪ್ರಮಾಣದ ಯಂತ್ರ ಹಾಕಿ ಪ್ರತಿ ತಿಂಗಳು 30 ರಿಂದ 40 ಕೆ.ಜಿ. ಆಯುರ್ವೇದ ಬೆಲ್ಲವನ್ನು ತಯಾರಿಸುತ್ತಿರುವರು.

ಕರ್ನಾಟಕ ಸರ್ಕಾರದ 2003ರ 'ಕೃಷಿ ಪಂಡಿತ' ಪ್ರಶಸ್ತಿ ಪುರಸ್ಕೃತರಾದ ಎ.ಪಿ. ಚಂದ್ರಶೇಖರ್‌ರವರು ಈ ಆಯುರ್ವೇದ ಬೆಲ್ಲವನ್ನು ಅಜೀರ್ಣ, ಅರುಚಿ, ಕೆಮ್ಮು, ಕಫ, ಬಾಣಂತಿಯರ ಕಾಯಿಲೆಗಳಿಗೆ ವಿಶೇಷವಾಗಿ ಬಳಸಬಹುದೆಂದು ಹೇಳುತ್ತಾರೆ.

ವಿಳಾಸ: ಇಂದ್ರಪ್ರಸ್ಥ ತೋಟ, ಕಳಲವಾಡಿ, ಉದ್ಬೂರು ಅಂಚೆ, ಮೈಸೂರು ಜಿಲ್ಲೆ, ದೂರವಾಣಿ: 0821-2597936.

(ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ.)

ಸಾವಯವ ಕೃಷಿಯಲ್ಲಿ ಔಷಧಯುಕ್ತ ನೀರಾವರಿ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಮಲ್ಲಿಕಾರ್ಜುನಪುರ ಗ್ರಾಮದ ಅಣ್ಣೇಗೌಡರು ತಮ್ಮ ಒಂದೂವರೆ ಎಕರೆ ತೋಟದಲ್ಲಿ ಹಿಪ್ಪು ನೇರಳೆಯನ್ನು ಹದಿನೈದು ವರ್ಷಗಳಿಂದ ಬೆಳೆಯುತ್ತಾ ಬಂದಿದ್ದಾರೆ. ಹಿಪ್ಪು ನೇರಳೆ ಸೊಪ್ಪಿಗೆ ರೋಗ ತಗುಲಿ ಸರಿಯಾಗಿ ಬೆಳೆಯದೆ ರೇಷ್ಮೆ ಕೃಷಿ ಮಾಡಲು ಅಣ್ಣೇಗೌಡರಿಗೆ ತುಂಬಾ ಕಷ್ಟವಾಯಿತು. ನಂತರ ಸಾವಯವ ಕೃಷಿಯ ಬಗ್ಗೆ ಕೇಳಿ ತಿಳಿದುಕೊಂಡು ಗೊಬ್ಬರಕ್ಕಾಗಿ ಹುರುಳಿ, ಎಳ್ಳು, ಸೆಣಬು ಮುಂತಾದ ಸಸ್ಯಗಳನ್ನು ಹಿಪ್ಪು ನೇರಳೆಯ ಜೊತೆ ಬೆಳೆಸಿ ಕಟಾವಿನ ನಂತರ ಇವನ್ನು ಭೂಮಿಗೆ ಸೇರಿಸುತ್ತಿದ್ದರು.

ಮಳೆ ಮತ್ತು ವಿದ್ಯುತ್ ಅಭಾವದಿಂದ ನೀರು ನಿರ್ವಹಣೆಗಾಗಿ ಇವರು ತಮ್ಮ ತೋಟದಲ್ಲಿ 20 ಅಡಿ ಅಗಲ, 20 ಅಡಿ ಉದ್ದದ ಮಣ್ಣಿನ ತೊಟ್ಟಿ ನಿರ್ಮಿಸಿಕೊಂಡದ್ದು. ಆ ತೊಟ್ಟಿಗೆ ಗಂಜಲ, ಗೋಬರ್ ಗ್ಯಾಸ್ ಬಗ್ಗಡ, ಜಮೀನಿನಲ್ಲೇ ಸಿಗುವ ಕಳೆ ರೂಪದಲ್ಲಿರುವ ಮುಟ್ಟಿದರೆ ಮುನಿ, ನಾಯಿ ತುಳಸಿ, ಪಾರ್ಥೇನಿಯಂ, ಗರಿಕೆ, ಉತ್ತರಾಣಿ ಹಾಗು ಮರದ ಸೊಪ್ಪುಗಳಾದ ಹೊಂಗೆ, ಬೇವು, ಎಕ್ಕ, ಲಕ್ಕಿ, ದೇವರಿಗೆ ಬಳಸಿದ ಬಗೆ ಬಗೆಯ ಹೂವು ಪತ್ರೆ ಮುಂತಾದವುಗಳನ್ನು ತೊಟ್ಟಿಗೆ ಹಾಕುತ್ತಾರೆ. ಹಾಗೆಯೇ ಕತ್ತಾಳೆ, ರೇಷ್ಮೆ ಬೆಳೆಯಲ್ಲಿ ಉಪಯೋಗಿಸುವ ಸುಣ್ಣವನ್ನು ಸಹ ತೊಟ್ಟಿಯಲ್ಲಿ ಸುರಿದು ಕರಗಿಸಿ ಆ ನೀರನ್ನು ತೋಟಕ್ಕೆ ಹಾಯಿಸುತ್ತಾರೆ. ಈ ನೀರಿನಲ್ಲಿ ಔಷಧಯುಕ್ತ ಪೋಷಕಾಂಶಗಳೂ ಸೇರಿದ್ದುದ್ದರಿಂದಾಗಿ ಅಣ್ಣೇಗೌಡರು ಉತ್ತಮ ಇಳುವರಿ ಪಡೆಯುವಂತಾಗಿರುತ್ತಾರೆ.

ನಂದೀಶರ ನೈಸರ್ಗಿಕ ಭತ್ತದ ಕೃಷಿ

ಪಟ್ಟಣದಲ್ಲಿ ಪಿ.ಯು.ಸಿ ಓದುತ್ತಿದ್ದ ನಂದೀಶ್‌ರವರು 1998ರಲ್ಲಿ ಅನಿವಾರ್ಯ ಕಾರಣಗಳಿಂದ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು, ಚುರ್ಚುಗುಂಡಿ ಗ್ರಾಮದಲ್ಲಿರುವ ತಮ್ಮ ಮನೆಗೆ ಹಿಂತಿರುಗಬೇಕಾಗಿ ಬಂತು. ಹೊಸದಾಗಿ ಊರಿಗೆ ಬಂದಿದ್ದ ಅವರು ಅಡಿಕೆ ತೋಟದಲ್ಲಿನ ಸಮಸ್ಯೆಗಳನ್ನು ನೋಡಿ ದಾರಿ ಕಾಣದಾದರು. ಆಗ ಪುಕೊಮೊಕೊ ಪುಸ್ತಕಗಳು ಅವರ ಮಾರ್ಗದರ್ಶಿಯಾದವು. ಅಲ್ಲಿಂದ ತೋಟದಲ್ಲಿ ಪ್ರಯೋಗಗಳು ಶುರುವಾದವು. ಮೊದಲನೆಯದಾಗಿ ತೋಟದ ಉಳುಮೆ ನಿಲ್ಲಿಸಿದರು. ಉಳುಮೆ ನಿಲ್ಲಿಸಿದ ಅದೇ ಬೇಸಿಗೆಯಲ್ಲಿ ನೆಲದ ತೇವಾಂಶ ಹೆಚ್ಚು ದಿನ ನಿಲ್ಲತೊಡಗಿತು. ಬೇಸಿಗೆಯ ಸೊಪ್ಪು ಕಳೆಗಳು ನೆಲವನ್ನು ಮುಚ್ಚಿದವು. ಇದರ ಪರಿಣಾಮ ಅಡಿಕೆಯ ಗರಿಗಳ ರಸವನ್ನು ಹೀರುತ್ತಿದ್ದ ನುಸಿ ಕಮ್ಮಿಯಾಗ ತೊಡಗಿದವು. ಅಡಿಕೆ ಗರಿಗಳು ಹಸುರಿನಿಂದ ತುಂಬ ತೊಡಗಿದವು. ಮಳೆಗಾಲದಲ್ಲಿ ಹೆಚ್ಚಿನ ಮಳೆಯಿಂದ ನೀರು ನಿಲ್ಲುತ್ತಿತ್ತು. ಅದಕ್ಕೆ ಪ್ರತಿ ಅಡಿಕೆ ಮರಗಳ ಸಾಲುಗಳ ನಡುವೆ ಅರ್ಧ ಅಡಿ ಮಣ್ಣು ತೆಗೆಸಿ ಕಾಲುವೆ ಮಾಡಿಸಿದರು. ಆಗ ಹೆಚ್ಚಿನ ನೀರು ಕಾನಿ ಮುಖಾಂತರ ಹೊರ ಹೋಗುವುದಲ್ಲದೆ, ಮರಗಳ ಬೇರುಗಳಿಗೆ ಉಸಿರಾಟಕ್ಕೆ ಅನುವು ಮಾಡಿಕೊಟ್ಟಂತಾಯಿತು.

ಸಾರಜನಕ, ಪೊಟ್ಯಾಶ್ ಸ್ಥಿರೀಕರಣಕ್ಕಾಗಿ ಕಡಿಮೆ ಜಾಗದಲ್ಲಿ ಹೆಚ್ಚು ಹಸುರಿನ ಸೊಪ್ಪು ಕೊಡುವ ಹಸುರೆಲೆ (ದ್ವಿದಳ) ಗಿಡ ಮತ್ತು ಬಳ್ಳಿ ಬೆಳೆಗಳನ್ನು ಬೆಳೆಸಿ ಭೂಮಿಗೆ ಸೇರಿಸಿದರು.

ಈ ಹಸುರೆಲೆ ಗಿಡದ ಪ್ರಯೋಗವನ್ನೇ ಭತ್ತ ಬೆಳೆಯಲು ಬಳಸಿದರು. ಇದು ಮಣ್ಣಿನ ಕಣ ರಚನೆಯನ್ನು ಉತ್ತಮಗೊಳಿಸಿತು. ಸೂಕ್ಷ್ಮ ಜೀವಿಗಳಿಗೆ ಮತ್ತು ಎರೆ ಹುಳುಗಳಿಗೆ ಆಹಾರ, ಬೆಳೆಗಳಿಗೆ ಪೋಷಕಾಂಶ ದೊರಕಿತು. ಮಣ್ಣು ಕೊಚ್ಚಣೆ , ಖರ್ಚು, ಸಮಯ, ಶ್ರಮ ಉಳಿತಾಯದ ಜೊತೆಗೆ ಬಿದ್ದ ಮಳೆ ನೀರು ಪೂರ್ತಿಯಾಗಿ ಇಂಗಿತು.

ಭತ್ತದ ಕಟಾವಿನ ಬಳಿಕ ಮತ್ತು ನಾಟಿಗೆ ಮುಂಚೆ ಈ ರೀತಿ ಎರಡು ಬಾರಿ ಹಸುರೆಲೆ ಸೇರಿಸಿ ಗೊಬ್ಬರ ಮಾಡುವುದು ಮತ್ತು ಜೈವಿಕ ಗೊಬ್ಬರ ಬಳಕೆ ಬಿಟ್ಟರೆ ಗೊಬ್ಬರಕ್ಕಾಗಿ ಇನ್ನೇನೂ ಬಳಸುತ್ತಿರಲಿಲ್ಲ. ಕೊಟ್ಟಿಗೆ ಗೊಬ್ಬರವಾಗಲಿ, ಕೆರೆಗೋಡಾಗಲಿ 8–10 ವರ್ಷಗಳಿಂದ ಭತ್ತಕ್ಕೆ ಬಳಸೇ ಇಲ್ಲ ಎಂಬುದಾಗಿ ನಂದೀಶ್‌ರವರು ತಾವು ಮಾಡುವ ಬೇಸಾಯದ ಕ್ರಮವನ್ನು ವಿವರಿಸುತ್ತಾರೆ. ಇದರಿಂದ ಉತ್ತಮ ಫಲಿತಾಂಶವನ್ನು ಪಡೆದಿರುವುದಾಗಿ ನಂದೀಶ್‌ರವರು ಹೇಳುತ್ತಾರೆ.

(ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಗೆ ಕಳುಹಿಸಿಕೊಡಲಾಗಿದೆ).

ಭತ್ತಕ್ಕೆ ಸಾವಯವ 'ಯೂರಿಯಾ'

ತಮಿಳುನಾಡಿನ ಚೆಂಗಾಲ್‌ಪಟ್ಟುವಿನ ರೈತ ಮುಗಂದನ್ ಭತ್ತಕ್ಕೆ ರಾಸಾಯನಿಕ (ಯೂರಿಯಾ)ದ ಬದಲು ಸ್ಥಳೀಯವಾಗಿ ದೊರೆಯುವ ಕಡಲೆ ಹಿಂಡಿ/ಶೇಂಗಾ ಹಿಂಡಿ ಮತ್ತು ಹಸುವಿನ ಗಂಜಲವನ್ನು ಬಳಸಿ ಉತ್ತಮ ಫಲಿತಾಂಶವನ್ನು ಪಡೆದಿದ್ದಾರೆ.

10 ಕಿ.ಗ್ರಾಂ ಶೇಂಗಾ ಹಿಂಡಿಯನ್ನು 20 ಲೀಟರ್ ಹಸುವಿನ ಗಂಜಲದಲ್ಲಿ ಎರಡು ದಿನಗಳ ಕಾಲ ನೆನೆಯಿಸಿ ಸಸಿಗಳನ್ನು/ಪೈರನ್ನು ನಾಟಿ ಮಾಡುವ 12 ದಿನಗಳ ಮುಂಚೆ ನೀರಿನ ಕಾಲುವೆಯ ಮುಖಾಂತರ ಸಸಿ ಮಡಿಗೆ ಹರಿಸಿದರು. ಇದರಿಂದ ಯೂರಿಯಾಗಿಂತ ಉತ್ತಮ ಫಲಿತಾಂಶವನ್ನು ಪಡೆದಿದ್ದಾರೆ.

ಮೂಲ: ಹನೀ ಬೀ, Vol.16(1), ಜನವರಿ–ಮಾರ್ಚ್, 2005

ಪಟ್ಟಣಶೆಟ್ಟಿಯ ನುಗ್ಗೆ ತಳಿ

ಧಾರವಾಡದ ಒಬ್ಬ ಸಾಮಾನ್ಯ ರೈತ ನಿಜಗುಣಪ್ಪ ಪಟ್ಟಣ ಶೆಟ್ಟಿಯವರು ಪಿ.ಡಿ–1 (ಪಟ್ಟಣ ಶೆಟ್ಟಿ, ಧಾರವಾಡ–1) ಎಂಬ ಹೊಸ ನುಗ್ಗೆ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ . ಕಡಿಮೆ ಎತ್ತರ, ಅಲ್ಪಾವಧಿಯ, ಅಧಿಕ ಇಳುವರಿ (450–500 ಕಾಯಿಗಳು ವರ್ಷಕ್ಕೆ) ಹೆಚ್ಚು ತಿರುಳನ್ನು ಹೊಂದಿರುವ ಉತ್ತಮ ಗುಣಮಟ್ಟದ ತಳಿ ಇದಾಗಿದ್ದು ಹಿತ್ತಲಗಿಡವಾಗಿ (ಮನೆಯ ಕೈತೋಟಗಳಲ್ಲಿ), ಸಣ್ಣ ರೈತರು ವಾಣಿಜ್ಯ ಬೆಳೆಯಾಗಿ, ತೋಟಗಳ ಅಂಚುಗಳಲ್ಲಿ ಗಾಳಿ ತಡೆಗಾಗಿ ಬೆಳೆಸಬಹುದಾಗಿದೆ. ಇದರಿಂದ ದನಕರುಗಳಿಗೆ ಮೇವು, ಮನೆಗೆ ತಾಜಾ ತರಕಾರಿ, ಕಾಯಿಗಳನ್ನು ಮಾರಾಟ ಮಾಡುವುದರಿಂದ ಹಣ ಗಳಿಸಬಹುದಾಗಿದೆ ಎಂದು ಪಟ್ಟಣ ಶೆಟ್ಟಿಯವರು ಹೇಳುತ್ತಾರೆ. ನುಗ್ಗೆ ಗಿಡದ ಹೂ, ಎಲೆ, ಕಾಯಿಗಳು ಉತ್ತಮ ತರಕಾರಿಯಾಗಿದ್ದು, ಔಷಧಿಯ ಗುಣಗಳನ್ನು ಹೊಂದಿದ್ದು ಆರೋಗ್ಯಕರವಾದುದು ಎಂಬುದನ್ನು ಪಟ್ಟಣ ಶೆಟ್ಟಿಯವರು ಈ ಹೊಸ ನುಗ್ಗೆ ತಳಿಯನ್ನು ಬೆಳಸಿ, ಬಳಸಿ, ಕಂಡುಕೊಂಡಿದ್ದಾರಲ್ಲದೆ ಬೇರೆಯವರ ಉಪಯೋಗಕ್ಕೂ ಉಳಿಸಿಕೊಂಡಿದ್ದಾರೆ. ಬೀಜ, ಸಸಿಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ . ನಿಜಗುಣಪ್ಪ ವಿ. ಪಟ್ಟಣ ಶೆಟ್ಟಿ ಬಿನ್ ವೀರಭದ್ರಪ್ಪ ಮ.ಸಂ.81, 1ನೇ ಮುಖ್ಯರಸ್ತೆ, 1ನೇ ತಿರುವು, ವಿನಾಯಕ ನಗರ, ಧಾರವಾಡ, ದೂ: 08036 2472104, 9448113587

ಶ್ರೀ ಸುಭಾಷ್ ಪಾಳೇಕರ - ನೈಸರ್ಗಿಕ ಕೃಷಿಯ ರೂವಾರಿ

ಸಂಗ್ರಹ: ಶ್ರೀ ಬಸವರಾಜ ತಂಬಾಕೆ,
ಪ್ರಕಟಣೆ: ಬಸವ ತೀರ್ಥ ವಿದ್ಯಾಪೀಠದ ಕಾಯಕ ವಿಕಾಸ ವೇದಿಕೆ,
ಹುಮನಾಬಾದ, ಬೀದರ ಜಿಲ್ಲೆ

ಮಹಾರಾಷ್ಟ್ರದ ಅಮರಾವತಿಯ ಉತ್ಸಾಹಿ ಯುವಕ ಸುಭಾಷ್ ಪಾಳೇಕರರು ಬಿ.ಎಸ್ಸಿ (ಕೃಷಿ) ಮುಗಿಸಿ ತನ್ನ ಜಮೀನಿಗೆ ಕಾಲಿಟ್ಟರು. ಹಿರಿಯರು ಮಾಡಿಕೊಂಡು ಬಂದ ವ್ಯವಸಾಯ ಪದ್ಧತಿ ಸರಿ ಕಾಣಲಿಲ್ಲ. ರಾಸಾಯನಿಕ ಗೊಬ್ಬರ, ಔಷಧಿಯನ್ನು ಬಳಸಿ ಇಳುವರಿ ಅಧಿಕಗೊಳಿಸುತ್ತೇನೆ ಎಂದಾಗ ಹಿರಿಯರು ಸುಮ್ಮನಾದರು. 12 ವರ್ಷದಲ್ಲಿ ಸುಭಾಷ್‌ರ ನೆಲ ಬರಡಾಗುತ್ತಾ ಬಂತು. ಇಳುವರಿ ಕಡಿಮೆಯಾಯ್ತು. ಖರ್ಚು ಅಧಿಕವಾದಾಗ ಅವರೇ ಹೊಸ ದಾರಿ ಕಂಡುಕೊಂಡರು. ದೇಸಿ ಆಕಳ 100 ಕೆಜಿ ಗೊಬ್ಬರವನ್ನು ಯಾವುದೇ ಬೆಳೆ ಬೆಳೆಯುವಾಗ ಬೀಜದೊಂದಿಗೆ (ಶೋಧಿಸಿ) ಬಿತ್ತನೆ ಮಾಡಿದರೆ ಅಧಿಕ ಇಳುವರಿ ಸಿಗುತ್ತದೆ ಎಂಬುದನ್ನು ಅರಿತರು. ಭತ್ತವೇ ಆಗಲಿ ಯಾವುದೇ ಫಸಲಿರಲಿ ಇದರ ಅಧಿಕ ಇಳುವರಿಗೆ ತಿಂಗಳಿಗೊಮ್ಮೆ ನೀರಿನೊಂದಿಗೆ 200 ಲೀ 'ಜೀವಾಮೃತ' ನೀಡಬೇಕು ಎಂಬುದು ಇವರ ತತ್ವವಾಯಿತು.

ಜೀವಾಮೃತವೆಂದರೆ 10 ಕೆಜಿ ದೇಸಿ ದನದ ಸಗಣಿ, 5 ರಿಂದ 10 ಲೀಟರ್ ಗೋಮೂತ್ರ, 2 ಕೆಜಿ ಬೆಲ್ಲ, 2 ಕೆಜಿ ಯಾವುದಾದರೂ ದ್ವಿದಳ ಧಾನ್ಯದ ಹಿಟ್ಟು, ಒಂದು ಮುಷ್ಠಿ ಬೇಲಿ ಮಣ್ಣು ಇವಿಷ್ಟನ್ನು 200 ಲೀ ನೀರಿನಲ್ಲಿ ಸೇರಿಸಿ ಎರಡರಿಂದ ಏಳು ದಿನಗಳವರೆಗೆ ನೆರಳಲ್ಲಿಟ್ಟ ಒಂದು ದ್ರಾವಣ.

ಇದನ್ನು ದಿನ ಬೆಳಿಗ್ಗೆ ಮತ್ತು ಸಂಜೆ ಚೆನ್ನಾಗಿ ಗುಟಾಯಿಸಿ ಬೆಳೆಗೆ ಕೊಡುವ ನೀರಿನೊಂದಿಗೆ ಕೊಟ್ಟರಾಯಿತು.

ಬೀಜ ಸಂಸ್ಕರಣೆ ಮಾಡಲು ಮತ್ತೊಂದು 'ಬೀಜಾಮೃತ'ವನ್ನು ಪಾಳೇಕರರು ಸೂಚಿಸಿರುವರು. ದೇಸಿ ದನದ 5 ಕೆ.ಜಿ. ಸಗಣಿ, 5 ಲೀ ಗೋಮೂತ್ರ, ದೇಸಿ ದನ ಅಥವಾ ಕುರಿಯ 1 ಲೀ ಹಾಲು, 1/4 ಕೆಜಿ ಸುಣ್ಣ 20 ಲೀ ನೀರು. ಈ ಮಿಶ್ರಣವನ್ನು 24 ಗಂಟೆ ಇಟ್ಟು, ನಂತರ ಬಿತ್ತನೆ ಬೀಜದ ಮೇಲೆ ಸಿಂಪಡಿಸಿ, ನೆರಳಿನಲ್ಲಿ ಬೀಜವನ್ನು ಒಣಗಿಸಿ ಬಿತ್ತಿದರೆ ಶೀಘ್ರ ಹಾಗೂ ಅಧಿಕ ಮೊಳಕೆಯಿಂದ ಉತ್ತಮ ರೋಗ ನಿರೋಧಕ ಬೆಳೆ ನಮ್ಮದಾಗುತ್ತದೆ ಎಂಬುದು ಸುಭಾಷರ ಅಭಿಪ್ರಾಯ.

ಫಸಲನ್ನು ಕೊಯ್ದಾಗ ಕೆಳಗೆ ಉಳಿಯುವ ಬೇರು ಭಾಗ 'ಆಚ್ಛಾದನೆ' ಫಸಲಿನ ಬೇಡದ ಭಾಗಗಳನ್ನು ಮಣ್ಣಿನ ಆರ್ದ್ರತೆಯನ್ನು ಉಳಿಸಲು ಮುಚ್ಚಿಗೆಯಾಗಿ ಬಳಸಿದರೆ ಅದು 'ಕಾಷ್ಟಾಚ್ಛಾದನೆ' ಎನ್ನುತ್ತಾರೆ ಸುಭಾಷ್.

ಈ ಸರಳ ಪ್ರಾಕೃತಿಕ ಕೃಷಿಯಲ್ಲಿ ಅಂತರ ಬೆಳೆಗಳ ಅವಶ್ಯಕತೆಯನ್ನು ಒತ್ತಿ ಹೇಳುವ ಪಾಳೇಕಾರರು. ಕಡಿಮೆ ಜಾಗದಲ್ಲಿ ಅಧಿಕ ಬೆಳೆಗಳನ್ನು ಪಡೆಯಬಹುದೆಂಬುದಕ್ಕೆ 36X36 ಅಡಿಯ ಒಂದು ಗುಂಟೆ ಜಾಗದ ನಾಲ್ಕು ಮೂಲೆಗಳಲ್ಲಿ ತೆಂಗು. ಮಧ್ಯ 9X9 ಅಡಿಗೊಂದರಂತೆ 21 ಅಡಿಕೆ. ಇದರ ಮಧ್ಯ ಹಣ್ಣಿನ ಗಿಡಗಳು 20. ಎರಡು ಸಾಲುಗಳ ಮಧ್ಯೆ 16 ಬಾಳೆ. ಇದರ ಮಧ್ಯೆ ನುಗ್ಗೆ ಹಾಗೂ ಗೊಬ್ಬರಕ್ಕಾಗಿ ಗ್ಲಿರಿಸಿಡಿಯಾ 10 ಗಿಡಗಳು. ನೀರು ಹರಿಸುವ ಕಾಲುವೆಯ ಇಕ್ಕೆಲುಗಳಲ್ಲಿ ಈರುಳ್ಳಿ, ಮೆಣಸು, ಅಲಂಡೆ, ಅವರೆ ಅಲ್ಲಲ್ಲಿ ಬೂದುಗುಂಬಳ ಹಾಗೂ ಸೋರೆ ಬೆಳೆದರೆ ಸಾಕು. ಸದಾ ಹಲವು ಫಸಲು ಬಂದು ರೈತನ ಜೇಬು ತುಂಬಿಸುತ್ತದೆ ಎನ್ನುತ್ತಾರೆ.

ಇವರ ಪ್ರಕಾರ ಎರಡು ಲೀಟರ್ ನೀರಿನಲ್ಲಿ 200 ಗ್ರಾಂ ಕಾಳು ಮೆಣಸಿನ ಪುಡಿಯನ್ನು ಹಾಕಿ, ಒಂದು ಲೀಟರ್ ಆಗುವವರೆಗೂ ಕುದಿಸಿ. 5 ಲೀಟರ್ ದೇಶೀಯ ಹಾಕಳ ಹಾಲನ್ನು 200 ಲೀಟರ್ ನೀರಿನಲ್ಲಿ ಬೆರಸಿ ಸಿಲೀಂದ್ರ ನಾಶಕವಾಗಿ ಬಳಸಬವುದೆನ್ನುತ್ತಾರೆ. ಹಾಗೆಯೇ 10 ಕಿಲೋ ಬೇವಿನ ಬೀಜ. ದೇಶೀಯ ದನದ 5 ಕಿಲೋ ಸಗಣಿ ಮತ್ತು 10 ಲೀಟರ್ ಗಂಜಲ. 200 ಲೀಟರ್ ನೀರಿನಲ್ಲಿ ಎರಡು ದಿನ ಇಟ್ಟು ನಂತರ ಸೋಸಿ ಗಿಡಗಳಿಗೆ ಸಿಂಪಡಿಸಿದರೆ ಹೇನು (ಎಪಿಡ್ಸ್), ಜಿಗಿ ಹುಳು(ಜಾಸಿಡ್ಸ್), ಬಿಳಿ ತಿಗಣೆ (ಮಿಲಿಬಗ್), ಬಿಳಿ ನೋಣ(ವೈಟ್ ಫ್ಲ)ಗಳು ನಿರ್ನಾಮವಾಗುತ್ತವೆ ಎನ್ನುವುದು ಸುಭಾಷ್ ಪಾಳೇಕರರ ಇನ್ನೊಂದು ಕ್ರಮ. ಇದಕ್ಕೂ ಬಗ್ಗದಿದ್ದಲ್ಲಿ ಮತ್ತಷ್ಟು ತೀಕ್ಷ್ಣವಾದ 'ನೀಮ್ ಬಾಣ', 'ರಾಮ್ ಬಾಣ', 'ಅಗ್ನಿ ಅಸ್ತ್ರ'ಗಳಂತಹಾ ಸಸ್ಯ ಔಷಧಿಗಳನ್ನು ಪಾಳೇಕರರು ಸೂಚಿಸುತ್ತಾರೆ.

ಸುಭಾಷ್ ಪಾಳೇಕರರ ಈ ನೈಸರ್ಗಿಕ ಕೃಷಿ ಪದ್ಧತಿಯನ್ನು ರಾಜ್ಯ ರೈತ ಸಂಘ ಒಪ್ಪಿ, ಈ ಬಗ್ಗೆ ಜಿಲ್ಲೆ ಜಿಲ್ಲೆಯಲ್ಲೂ ತರಬೇತಿ ಶಿಬಿರ ಏರ್ಪಡಿಸಿರುತ್ತದೆ. ಪಾಳೇಕರರ ಈ ಅಪಾರ ಸೇವೆಯನ್ನು ಗುರುತಿಸಿ, ಚಿತ್ರದುರ್ಗದ ಮರುಘ ರಾಜೇಂದ್ರ ಮಠ ಈ ಬಾರಿಯ 'ಬಸವಶ್ರೀ' ಪ್ರಶಸ್ತಿ ನೀಡಿ ಪುರಸ್ಕರಿಸಿರುತ್ತದೆ.

ಲೇಖನ: ಸಿದ್ದರಾಮೇಗೌಡ

ಇಬ್ಬೀಡು ನಾರಾಯಣಸ್ವಾಮಿಯ ಮಿತ ನೀರು ಬಳಕೆಯ ಭತ್ತದ ಮಡಿ

ಲೇಖನ: ಸಿದ್ದರಾಮೇಗೌಡ

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಇಬ್ಬೀಡು ಗ್ರಾಮದ ಸಾವಯವ ಕೃಷಿಕರಾದ ಶ್ರೀ ಎ.ಆರ್. ನಾರಾಯಣ ಸ್ವಾಮಿಯವರು ಕಡಿಮೆ ನೀರು ಬಳಸಿ ಭತ್ತ ಬೆಳೆದು ಇಳುವರಿ ಹೆಚ್ಚಿಸಿಕೊಳ್ಳುವುದರ ಜೊತೆಗೆ ಕೆಲಸ, ಸಮಯ ಹಾಗೂ ಕಷ್ಟಗಳೂ ಕಡಿಮೆಯಾಗುವಂತಹ ಪದ್ಧತಿಯನ್ನು ಕಳೆದ ಎರಡು ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದಾರೆ.

ಬೆಳೆಯುವ ವಿಧಾನ:

ಗದ್ದೆಗೆ ಬೇಕಾಗುವಷ್ಟು ಬೀಜವನ್ನು 24 ರಿಂದ 30 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ಗೋಣಿ ಚೀಲದಲ್ಲಿ12 ಗಂಟೆಗಳ ಕಾಲ ಕಟ್ಟಿ ಇಡಬೇಕು. ಇಷ್ಟರೊಳಗೆ ಭತ್ತದ ಮೊಳಕೆ ಒಡೆದಿರುತ್ತದೆ. ಈ ಭತ್ತವು ಮಡಿಯಲ್ಲಿ ಸಮನಾಗಿ ಹರಡಲು ಅನುಕೂಲವಾಗಿರುತ್ತದೆ. ಭತ್ತದಲ್ಲಿ ಬೇರು ಉದ್ದವಾದರೆ ಸಸಿ ಮಡಿಯಲ್ಲಿ ಸಮನಾಗಿ ಹರಡಲು ಆಗುವುದಿಲ್ಲ.

ಅವರಿಗೆ ಅನುಕೂಲವಾಗುವ ಜಾಗದಲ್ಲಿ ಸಸಿ ಮಡಿ ತಯಾರಿಸಿಕೊಳ್ಳಬಹುದು. ಹಿತ್ತಲಲ್ಲಿ, ಮನೆಯ ಮುಂದೆ, ತೆಂಗಿನ ತೋಟ, ಹೊಲ, ಹೀಗೆ ಎಲ್ಲಾ ಜಾಗದಲ್ಲಿಯೂ ಬೆಳೆಯಬಹುದು. ಮಡಿ



ತಯಾರಿಸಿಕೊಳ್ಳುವ ಜಾಗವನ್ನು ಸಮತಟ್ಟು ಮಾಡಿಕೊಂಡು ತೆಳುವಾದ ಪ್ಲಾಸ್ಟಿಕ್ ಹಾಳೆಯನ್ನು (ಚಿತ್ರದಲ್ಲಿ ತೋರಿಸಿರುವಂತೆ ನಾಲ್ಕು ಅಡಿ ಅಗಲ, ಅನುಕೂಲಕ್ಕನುಗುಣವಾಗಿ ಉದ್ದ) ಒಂದೇ ಸಮನಾಗಿ ಹರಡಿ ಭತ್ತವನ್ನು ಅದರ ಮೇಲೆ ತೆಳುವಾಗಿ ಹರಡಬೇಕು. ನಂತರ ಮೊದಲೆ ತಯಾರಿಸಿಕೊಂಡಿದ್ದ ಕಾಂಪೋಸ್ಟ್ ಗೊಬ್ಬರವನ್ನು ಒಂದು ಇಂಚು ದಪ್ಪನಾಗಿ ಭತ್ತ ಹಾಕಿದ ತಕ್ಷಣ ಹಿಂದೆ ಹಿಂದೆನೇ ಹಾಕಬೇಕು. ಬಿಸಿಲಿದ್ದಾಗ ಗೊಬ್ಬರ ಮುಚ್ಚುವುದು ತಡವಾದರೆ ಮೊಳಕೆಯ ಮೂತಿ ಒಣಗುತ್ತದೆ. ಹೀಗೆ ತಯಾರಿಸಿದ ಮಡಿಗೆ ಮಳೆ ಬಾರದಿದ್ದರೆ, ಕ್ಯಾನ್‌ನಲ್ಲಿ ದಿನಕ್ಕೊಂದು ಬಾರಿ ನೀರು ಹಾಕಿದರೆ ಸಾಕು ಭತ್ತದ ಮೇಲೆ ಒಂದು ಇಂಚು ಗೊಬ್ಬರವಿರುವುದರಿಂದ ಭತ್ತ ತಿನ್ನುವ ಹಕ್ಕಿಗಳ ಕಾಟ ಇರುವುದಿಲ್ಲ. ಸಸಿ ಮಡಿ ತಯಾರಾದ ಎಂಟರಿಂದ ಹತ್ತು ದಿನದಲ್ಲಿ ಸಸಿ ನಾಟಿ ಮಾಡಬೇಕು. ಇದಕ್ಕಿಂತ ಹೆಚ್ಚು ದಿನಗಳಾದರೆ ಸಸಿಗಳಲ್ಲಿ ಬೇರು ಹೆಚ್ಚಾಗಿ ಸಸಿ ಬಿಡಿಸಿ ನಾಟಿ ಮಾಡಲು ತೊಂದರೆಯಾಗುತ್ತದೆ.

ನಾಟಿ ಮಾಡುವ ವಿಧಾನ:

ಸಿದ್ದ ಪಡಿಸಿಕೊಂಡಿದ್ದ ಗದ್ದೆಗೆ ನಾಟಿ ಮಾಡಲು ಸಸಿಗಳನ್ನು ತೆಗೆದುಕೊಂಡು ಹೋಗಲು ಎರಡು ಅಡಿ ಅಗಲ ಎರಡು ಅಡಿ ಉದ್ದದ ತೆಳುವಾದ ಹಲಗೆಯನ್ನು ತಯಾರಿಸಿಕೊಂಡಿದ್ದು. ಸಸಿ ಮಡಿಯ ಒಂದು ಬದಿಯಿಂದ ಪ್ಲಾಸ್ಟಿಕ್ ಹಾಳೆ ಮೇಲೆತ್ತಿ ಹಲಗೆಯನ್ನು ಕೆಳಗಿಟ್ಟು ಹಲಗೆಯ ಅಳತೆಗೆ ಪ್ಲಾಸ್ಟಿಕ್ ಹಾಗು ಮಡಿ ಕತ್ತರಿಸಿ ನಾಟಿ ಮಾಡುವ ಗದ್ದೆಗೆ ತೆಗೆದುಕೊಂಡು ಹೋಗಬಹುದು. ಮಡಿಯಿಂದ ಗದ್ದೆಗೆ ದೂರವಿದ್ದರೆ, ಈ ಹಲಗೆಯ ಅಳತೆಗೆ ಕತ್ತರಿಸಿ ಗಾಡಿಯಲ್ಲಿ ಜೋಡಿಸಿಕೊಳ್ಳಬಹುದು ಅಥವಾ ಒಬ್ಬರು ಹೊರುವಷ್ಟು ದೊಡ್ಡ ಬುಟ್ಟಿಗೆ ತುಂಬಿಕೊಂಡು ಹೋಗಬಹುದು. ಈ ರೀತಿ ಮಡಿ ಮಾಡುವುದರಿಂದ ಆಗುವ ಅನುಕೂಲಗಳನ್ನು ನಾರಾಯಣ ಸ್ವಾಮಿಯವರು ಹೀಗೆ ವಿವರಿಸುತ್ತಾರೆ.

1. ಈ ರೀತಿ ಮಾಡುವುದರಿಂದ ಎರಡು ತಿಂಗಳಿಗಾಗುವಷ್ಟು ನೀರು ಉಳಿತಾಯವಾಗುವುದು.
2. ನಮಗೆ ಅನುಕೂಲವಾದ ಜಾಗದಲ್ಲಿ ಮಡಿ ತಯಾರಿಸಿ ಕೊಳ್ಳಬಹುದು.
3. ಒಂದು ಎಕರೆಗೆ ನಾಟಿ ಮಾಡಲು ಹತ್ತು ಜನರು ಒಂದು ದಿನವಿಡೀ ಪೈರು ಕೀಳಬೇಕಾಗಿತ್ತು. ಇದು ತಪ್ಪಿದೆ.
4. ಸಸ್ಯ ಮಡಿ ಮಾಡಿದ ನಂತರ ಒಂದೇ ವಾರದೊಳಗೆ ಸಸಿಗಳನ್ನು ನಾಟಿ ಮಾಡಬೇಕಾಗಿರುವುದರಿಂದ ನೀರು ಹೆಚ್ಚು ಉಳಿತಾಯವಾಗುತ್ತದೆ.
5. ತಯಾರಿಕೆಯಲ್ಲಿ ಮಡಿ ನೀರು ಪೋಲಾಗುವುದು ಉಳಿಯುತ್ತದೆ.
6. ಹಕ್ಕಿಗಳಿಂದ ಮಡಿಯಲ್ಲಿ ಭತ್ತ ಹಾಳಾಗುವುದಿಲ್ಲ.
7. ಮಡಿ ಮಾಡುವ ಕೆಲಸ, ಸಮಯ ಉಳಿಯುತ್ತದೆ.
8. ಬೀಜಕ್ಕೆ ಹೆಚ್ಚು ಭತ್ತ ಬೇಕಾಗುವುದಿಲ್ಲ.
9. ಮಡಿಯಲ್ಲಿ ಯಾವ ರೋಗವೂ ಬರುವುದಿಲ್ಲ.
10. ಬೇಗ ನಾಟಿ ಮಾಡುವುದರಿಂದ ಸಸಿಗಳಲ್ಲಿ ಹೆಚ್ಚು ಹೆಚ್ಚು ತಂಡೆಗಳು ಒಡೆದು ಹುಲಸಾಗಿ ಬೆಳೆಯುತ್ತವೆ ಹಾಗೂ ಇಳುವರಿ ಹೆಚ್ಚಾಗುತ್ತದೆ.
11. ಸಾಮಾನ್ಯವಾಗಿ ಮಹಿಳೆಯರು ಸೊಂಟ ಬಗ್ಗಿಸಿಕೊಂಡು ಸಸಿ ಕೀಳಬೇಕಾಗಿತ್ತು, ಇದರಿಂದ ಆ ಮಹಿಳೆಯರ ಕಷ್ಟ ತಪ್ಪಿದೆ.
12. ಊರಿನಲ್ಲಿ ಎಲ್ಲರೂ ಒಂದೇ ಕಾಲದಲ್ಲಿ ನಾಟಿ ಮಾಡುವುದರಿಂದ ಒಂದೇ ದಿನ ನಾಟಿ ಮಾಡಲು ಹೆಚ್ಚು ಜನರು ಬರುತ್ತಿರಲಿಲ್ಲ. ಎರಡು ಮೂರು ದಿನ ಗೋಳಾಡಬೇಕಿತ್ತು, ಆ ಸಮಸ್ಯೆ ತಪ್ಪಿದೆ ಎಂದು ನಾರಾಯಣಸ್ವಾಮಿಯವರು ತಮ್ಮ ಅನುಭವವನ್ನು ಹೇಳುತ್ತಾರೆ.

ಸಾವಯವ ಕೃಷಿಕರಾದ ಇಬ್ಬೀಡು ನಾರಾಯಣ ಸ್ವಾಮಿಯವರ ವಿಳಾಸ:

ನಾರಾಯಣ ಸ್ವಾಮಿ ಎ. ಆರ್., ಇಬ್ಬೀಡು, ಇಬ್ಬೀಡು ಅಂಚೆ,
ಬೇಲೂರು ತಾ., ಹಾಸನ (ಜಿ), ಫೋ: 08177-224926

ಹುಳುಕಾಟ:

ಮನುಷ್ಯರಲ್ಲಿ ಕಂಡು ಬರುವ ಚರ್ಮಕಾಯಿಲೆ, ಕೆರೆತ ಉಂಟಾಗಿ ಗಾಯವಾಗುವುದು, ಇವಕ್ಕೆ ದೊಡ್ಡ ಕಾರೆ ಚಕ್ಕೆ *(Randia uliginosa)*ಯ ಪುಡಿಯನ್ನು ಮೇಕೆಯ ಹಾಲಿನಲ್ಲಿ ಹೊಟ್ಟೆಗೆ ಕುಡಿಸಿ ಹುಳುಕಾಟದ ಮೇಲೆ ಲೇಪಿಸುವುದರಿಂದ 7–8 ದಿನಗಳಲ್ಲಿ ಹುಳುಕಾಟ ನಿಯಂತ್ರಣಕ್ಕೆ ಬರುತ್ತದೆಂದು ಕೋಲಾರದ ಮಾಲೂರು ತಾಲ್ಲೂಕಿನ ವೆಂಕಟರಾಜೇನ ಹಳ್ಳಿ ನಾರಾಯಣಪ್ಪನವರು ಹೇಳುತ್ತಾರೆ.

ತಿಂಗಳ ಋತು:

ಹೆಂಗಸರಲ್ಲಿ ಕಂಡು ಬರುವ ತಿಂಗಳ ಋತು ಹೊಟ್ಟೆ ನೋವಿಗೆ ಬೇವಿನ ಎಲೆ (10 ಗ್ರಾಂ) ತಾಟಿ ಬೆಲ್ಲ (50 ಗ್ರಾಂ)ವನ್ನು ನುಣ್ಣಗೆ ಅರೆದು ಉಂಡೆಯನ್ನಾಗಿ ಕಟ್ಟಿ ಅರೆ ಹೊಟ್ಟೆಗೆ ತಿನ್ನುವುದರಿಂದ ಹೊಟ್ಟೆ ನೋವು ಕಡಿಮೆಯಾಗುವುದೆಂದು ನಾರಾಯಣಪ್ಪನವರು ತಿಳಿಸಿದ್ದಾರೆ. ಈ ಮಾಹಿತಿಗಳನ್ನು ನಾರಾಯಣಪ್ಪನವರ ಮಗ ಶ್ರೀ ರಾಮಯ್ಯ ವಿ.ಎನ್ ಎಂಬ ಕೃಷಿ ವಿದ್ಯಾರ್ಥಿಯು ಹಿತ್ತಲಗಿಡಕ್ಕೆ ಒದಗಿಸಿರುತ್ತಾರೆ.

ಋತುಮತಿಯರಲ್ಲಿ ಹೊಟ್ಟೆ ನೋವು:

ಋತುಮತಿಯರಲ್ಲಿ ಕಂಡುಬರುವ ಹೊಟ್ಟೆನೋವಿಗೆ ಹಾಗಲ ಕಾಯಿ *(Memordica charantia)* ಎಲೆ ಎರಡು ಮತ್ತು ಗೋಲಿಗಾತ್ರದ ಬೆಲ್ಲ ಅರೆದು ಗುಳಿಗೆ ಮಾಡಿ ಸ್ನಾನಕ್ಕೆ ಮೊದಲು ತೆಗೆದುಕೊಂಡರೆ ಹೊಟ್ಟೆನೋವು ಬೇಗ ಉಪಶಮನವಾಗುವುದೆಂದು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕು ಗಂಡಸಿ ಗ್ರಾಮದ ಶಾಂತಮ್ಮ ಹೇಳುತ್ತಾರೆ.

ಇಸುಬು:

ಇದೊಂದು ಚರ್ಮ ಕಾಯಿಲೆ. ಇಸುಬಿನಲ್ಲಿ ಒಣ ಇಸುಬು, ನೀರು ಇಸುಬು ಎಂಬ ಎರಡು ವಿಧಗಳಿವೆ. ಕೈ ಮತ್ತು ಕಾಲುಗಳ ಮೇಲೆ ಆಗುವ ಈ ಇಸುಬುಗಳಿಗೆ ದೀಪಕಣಗಿಲೆ/ದೇವ ಕಣಗಿಲೆ *(Plumeria alba)* ಮರದ ಹಾಲನ್ನು ದಿನಕ್ಕೊಂದು ಬಾರಿಯಂತೆ ಮೂರು ದಿನಗಳ ಕಾಲ ಹಚ್ಚುವುದರಿಂದ ಇಸುಬನ್ನು ಹೋಗಲಾಡಿಸಬಹುದೆಂದು ಶಾಂತಮ್ಮ ಹೇಳುತ್ತಾರೆ.

ತಲೆ ಶೂಲೆ ನಿವಾರಣೆ:

ತೀವ್ರ ತಲೆ ಶೂಲೆಗೆ ಒರಿಸ್ಸಾದ ಹಳ್ಳಿಯ ಜನರು ಬಿಳಿ ಎಕ್ಕ *(Calotropis sps.)* ದ ಗಿಡದ ಹಾಲನ್ನು ಬಳಸುತ್ತಿದ್ದಾರೆ. ಒಂದು ವೇಳೆ ತಲೆಯ ಬಲ ಭಾಗದಲ್ಲಿ ನೋವಿದ್ದರೆ ಎಡಗಾಲಿನ ಬೆರಳಿನ ಮೇಲೆ ಒಂದೆರಡು ಹನಿ ಎಕ್ಕದ ಹಾಲನ್ನು ಹಾಕಬೇಕು. ಹಾಗೇ ತಲೆಯ ಎಡಭಾಗದಲ್ಲಿ ನೋವಿದ್ದರೆ ಬಲಗಾಲಿನ ಹೆಬ್ಬೆರಳಿನ ಮೇಲೆ ಹಾಕುವುದು ಆ ಭಾಗದ ಜನರು ಅನುಸರಿಸುತ್ತಿರುವ ಪದ್ಧತಿ.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 600/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಕರ್ಪೂರದಿಂದ ಸೊಳ್ಳೆಗಳ ನಿಯಂತ್ರಣ

ಕರ್ಪೂರದ ತೀಕ್ಷ್ಣ ಪರಿಮಳದಿಂದ ಸೊಳ್ಳೆಗಳನ್ನು ನಿಯಂತ್ರಿಸಬಹುದು. ಮುಚ್ಚಳವಿರುವ ಪ್ಲಾಸ್ಟಿಕ್ ಡಬ್ಬದಲ್ಲಿ ನೀರು ತುಂಬಿ ಅದಕ್ಕೆ ಕರ್ಪೂರವನ್ನು ಹಾಕಿ ಮನೆಯಲ್ಲಿಟ್ಟರೆ ಕರ್ಪೂರದ ಪರಿಮಳಕ್ಕೆ ಸೊಳ್ಳೆಗಳು ಓಡಿಹೋಗುತ್ತವೆ. ಸೊಳ್ಳೆಗಳ ಕಾಟದ ನಿಯಂತ್ರಣಕ್ಕೆ ಇದೊಂದು ಸರಳ ವಿಧಾನ.

ಆದರೆ ಕರ್ಪೂರದ ತೀಕ್ಷ್ಣ ಪರಿಮಳದ ನಿರಂತರ ಉಸಿರಾಟ ಆರೋಗ್ಯಕ್ಕೆ ಒಳ್ಳೆಯದಲ್ಲ. ಕೆಲವರಿಗೆ ಹೊಟ್ಟೆ ತೊಳಸಿದಂತಾಗುತ್ತದೆ

ಸೊಳ್ಳೆಬತ್ತಿಯ ವಿಷಯುಕ್ತ ಹೊಗೆಗಿಂತ ಇದು ಕಡಿಮೆ ಅಪಾಯಕಾರಿ. ಎರಡು–ಮೂರು ಕರ್ಪೂರಗಳನ್ನು ಹಾಕಿದರೆ ಎರಡು–ಮೂರು ದಿನಗಳವರೆವಿಗೂ ಆಗುತ್ತದೆ. ಅವು ಕರಗಿ ಹೋದ ನಂತರ ಮತ್ತೆ ಬೇರೆ ಕರ್ಪೂರವನ್ನು ಹಾಕಬೇಕು, ಬೇಡವೆಂದಾಗ ಮುಚ್ಚಿಡಬೇಕು.

ಮೂಲ: ಅಡಿಕೆ ಪತ್ರಿಕೆ, ಮೇ, 2005

ಅರಿಶಿಣದ ಹೊಗೆಯಿಂದ ಹಾವು, ಹಲ್ಲಿ, ಇಲಿಗಳ ನಿಯಂತ್ರಣ

ವಾಸದ ಮನೆಗಳಲ್ಲಿ ಗೋಡೆಯ ಬಿರುಕುಗಳು ಮುಂತಾದವುಗಳಲ್ಲಿ ಇಲಿ, ಹಲ್ಲಿ, ಒಮ್ಮೊಮ್ಮೆ ಹಾವುಗಳು ಸೇರುವುದುಂಟು. ಒರಿಸ್ಸಾದ ರೈತರು ಇವುಗಳನ್ನು ಓಡಿಸಲು ಮನೆಯ ಕಿಟಕಿ, ಬಾಗಿಲುಗಳನ್ನು ಮುಚ್ಚಿ ಮಡಕೆಯಲ್ಲಿ ಬೆಂಕಿಯ ಕೆಂಡದ ಮೇಲೆ ಅರಿಶಿಣದ ಪುಡಿಯನ್ನು ಹಾಕುತ್ತಾರೆ. ಹೊಗೆಯನ್ನು ಹೊರಗೆ ಹೋಗದಂತೆ ಸ್ವಲ್ಪ ಕಾಲ ನೋಡಿಕೊಳ್ಳುತ್ತಾರೆ. ನಂತರ ಕಿಟಕಿ ಬಾಗಿಲುಗಳನ್ನು ತೆರೆದಾಗ ಹಾವು, ಇಲಿ, ಹಲ್ಲಿ ಮುಂತಾದವುಗಳು ಓಡಿ ಹೋಗುತ್ತವೆ. ಹೀಗೆ ಮಾಡುವುದರಿಂದ ಮನೆಯನ್ನು ಸ್ವಚ್ಛಗೊಳಿಸಿ ದಂತಾಗುತ್ತದೆ. ಜೊತೆಗೆ ಕಾಲರ ಮತ್ತು ಕ್ಷಯ ರೋಗಿಗಳಿದ್ದಲ್ಲಿ ಸೋಂಕನ್ನು ಸ್ವಲ್ಪ ಮಟ್ಟಿಗೆ ತಡೆಯುವಲ್ಲಿ ಸಹಾಯವಾಗುತ್ತದೆ. ಹಳ್ಳಿಗಳಲ್ಲಿ ಕಾಲರ ಹರಡಿರುವ ಕಾಲದಲ್ಲಿ ಹೀಗೆ ಮಾಡುವುದು ಒರಿಸ್ಸಾದ ಹಳ್ಳಿಯ ಜನರ ವಾಡಿಕೆ.

*ಮೂಲ: **Honey Bee, Vol.16(1), Jan-March, 05***

ಇಲಿಗಳ ನಿಯಂತ್ರಣಕ್ಕೆ ಸುಲಭ ವಿಧಾನ

ಇಲಿಗಳ ನಿಯಂತ್ರಣಕ್ಕೆ ದೇವನಹಳ್ಳಿ ತಾಲ್ಲೂಕಿನ ಚೆನ್ನರಾಯಪಟ್ಟಣದ ಸಣ್ಣಪ್ಪನವರು ಸುಲಭ ವಿಧಾನವನ್ನು ಕಂಡುಕೊಂಡಿದ್ದಾರೆ. ಗೊಬ್ಬರದ ಗಿಡದ *(Glyricidia moculata)* ಸೊಪ್ಪನ್ನು ಇಲಿಗಳು ಓಡಾಡುವ ಸ್ಥಳಗಳಲ್ಲಿ ಹಾಕಬೇಕು. ಇಲಿಗಳು ಸೊಪ್ಪಿನ ಮೇಲೆ ಓಡಾಡಿದಾಗ ಅವುಗಳ ಘಾಟು ವಾಸನೆಯಿಂದ ಹಾನಿಗೀಡಾಗುತ್ತದೆ ಎಂದು ಸಣ್ಣಪ್ಪನವರು ಹೇಳುತ್ತಾರೆ.

ಹೊಲಗದ್ದೆ ತೋಟಗಳಲ್ಲಿ ಇಲಿಗಳ ಕಾಟವಿದ್ದಲ್ಲಿ ಬೆಳೆಯ ಸುತ್ತಲು ಎಕ್ಕದ ಗಿಡಗಳನ್ನು ಬೆಳಸಿದರೆ ಇಲಿಗಳ ಹಾವಳಿಯನ್ನು ನಿಯಂತ್ರಿಸಬಹುದೆಂದು ಅದೇ ಊರಿನ ಎನ್.ನಾಗರಾಜುರವರು ತಿಳಿಸಿದ್ದಾರೆ.


ಸಂಗ್ರಹ: ಅನಿತಾದೇವಿ ಆರ್ ಮತ್ತು ದೀಪ ಪಿ.ವಿ., 4ನೇ ಬಿಎಸ್ಸಿ (ಕೃಷಿ), ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು

ಕಾಡು ಪ್ರಾಣಿಗಳ ನಿಯಂತ್ರಣಕ್ಕೆ ರೈತರ ಮಾರ್ಗೋಪಾಯಗಳು

ಕಾಡು ಪ್ರಾಣಿಗಳಿಂದ ರೈತರಿಗಾಗುವ ನಷ್ಟ ಅಪಾರ. ತಮ್ಮ ಬೆಳೆಗಳನ್ನು ಪ್ರಾಣಿ, ಪಕ್ಷಿಗಳಿಂದ ರಕ್ಷಿಸಿಕೊಳ್ಳಲು ತಮ್ಮದೇ ಆದ ಮಾರ್ಗಗಳನ್ನು ಗ್ರಾಮೀಣ ಜನತೆ ಕಂಡುಕೊಂಡಿರುತ್ತಾರೆ. ಅಂತಹ ಕೆಲವು ವಿಧಾನಗಳನ್ನು ಈ ಕೆಳಗೆ ಪ್ರಕಟಿಸಲಾಗಿದೆ.

ಪ್ರಕಾಶ್ ಕೆ. ದೊಡ್ಡಮನಿಯವರ 'ಟೈಂಬಾಂಬ್'

ರಾತ್ರಿಯಾಗುತ್ತಲೆ ನೆಲಗಡಲೆ, ಸೂರ್ಯಕಾಂತಿ, ಕಬ್ಬು, ಜೋಳ, ತೊಗರಿ, ಗೆಣಸು, ಆಲುಗಡ್ಡೆ ಮುಂತಾದ ಬೆಳೆಗಳಿಗೆ ಗುಹೆ-ಪೊಟರೆ ಗಳಲ್ಲಿ ಅಡಗಿರುವ ವನ್ಯ ಮೃಗಗಳು, ಮೊಲ, ಅಳಿಲು ಮುಂತಾದ ಚಿಕ್ಕ ಪ್ರಾಣಿಗಳು ದಾಳಿ ಮಾಡಬಹುದು. ಇವುಗಳಿಂದ ಬೆಳೆ ರಕ್ಷಿಸಲು, ನಿಗದಿತ ಅವಧಿಗೊಮ್ಮೆ ಸದ್ದುಮಾಡುತ್ತಾ ರಾತ್ರಿಯಿಡೀ ಕೆಲಸ ಮಾಡುವ ಟೈಂ ಬಾಂಬ್ ಒಂದನ್ನು ಪ್ರಕಾಶ್ ಕಂಡುಹಿಡಿದಿರುವರು. ಇದು ಸರಳ ತಂತ್ರಜ್ಞಾನ ಹೊಂದಿದ್ದು ಅತ್ಯಂತ ಕಡಿಮೆ ಖರ್ಚಿನಲ್ಲಿ ರೈತರೇ ತಯಾರಿಸಿ, ಬಳಸಬಹುದು. ಇದರಿಂದ ಬೆಳೆಗಾಗಲೀ ಜನರಿಗಾಗಲಿ ಯಾವುದೇ ರೀತಿಯ ಹಾನಿಯಿಲ್ಲ. ಈ ವಿಧಾನದಿಂದ ಹಗಲಿನಲ್ಲಿ ಪಕ್ಷಿಗಳ ಕಾಟದಿಂದ ಜೋಳ, ನೆಲಗಡಲೆ ಮುಂತಾದವುಗಳನ್ನೂ ರಕ್ಷಿಸಬಹುದು.



ತಯಾರಿಸುವ ವಿಧಾನ:

ಮರದ ಹಲಗೆಯ ಒಂದು ಪಾರ್ಶ್ವದಲ್ಲಿ (ಚಿತ್ರದಲ್ಲಿ ತೋರಿಸಿರುವಂತೆ) ಸುಮಾರು 10–15 ತಿರುಪು ಕೊಂಡಿಗಳನ್ನು ಅಳವಡಿಸಬೇಕು. ಈ ಕೊಂಡಿಗಳಲ್ಲಿ ತೆಂಗಿನ ಹುರಿಯನ್ನು ತೂರಿಸಬೇಕು. ತೆಂಗಿನ ಹುರಿಯಲ್ಲಿ ಅಲ್ಲಲ್ಲಿ ಪಟಾಕಿಯನ್ನು ಸಿಕ್ಕಿಸಿ ಒಂದು ಬದಿಗೆ ಬೆಂಕಿಯನ್ನು ತಗುಲಿಸಬೇಕು. ತೆಂಗಿನ ಹುರಿಯು ತಾನಾಗಿಯೇ ಆರುವುದಿಲ್ಲ, ಹೀಗೆ ಹೊತ್ತಿದ ಹುರಿ ನಿಧಾನಕ್ಕೆ ಸುಡುತ್ತಾ ಬಂದಾಗ ಅದರಲ್ಲಿ ಸಿಕ್ಕಿಸಿದ ಪಟಾಕಿಯು ಸಿಡಿಯುತ್ತದೆ. ನಂತರ ಹುರಿಯು ಸುಡುತ್ತಲೆ ಹೋಗಿ ಮುಂದಿನ ಪಟಾಕಿಗಳು ಒಂದೊಂದಾಗಿ ಸಿಡಿಯುತ್ತಾ ಹೋಗುತ್ತವೆ.

ಆಗ್ಗಿಂದಾಗ್ಗೆ ಪಟಾಕಿ ಸಿಡಿಯುತ್ತಿರುವುದರಿಂದ ಶಬ್ದ ಉಂಟಾಗಿ ಪ್ರಾಣಿಗಳು, ಪಕ್ಷಿಗಳು ಹೆದರಿ ಓಡಿ ಹೋಗುತ್ತವೆ.

ಮುನ್ನೆಚ್ಚರಿಕೆಯ ಕ್ರಮವಾಗಿ ಟೈಂ ಬಾಂಬ್ ಸಿಡಿದಾಗ ಬರುವ ಬೆಂಕಿಯಿಂದ ಹೊತ್ತಿಕೊಳ್ಳುವಂತ ವಸ್ತುಗಳು ದೂರವಿರಬೇಕು ಎಂದು ಪ್ರಕಾಶರವರು ಹೇಳಿದ್ದಾರೆ.

ವಿಳಾಸ: ಪ್ರಕಾಶ್ ಕೆ. ದೊಡಮನಿ, ತಿಮ್ಮಾಪುರ ಗ್ರಾಮ, ರಾಂಪುರ ಅಂಚೆ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

ಮಂಗಗಳ ನಿಯಂತ್ರಣಕ್ಕೆ ಸೀಗಡಿ ಮೀನು!

ತೆಂಗು, ಅಡಕೆ, ತೋಟಗಳಲ್ಲಿ ಮಂಗಗಳ ಹಾವಳಿ ನಿಯಂತ್ರಣಕ್ಕೆ ಹಾಸನದ ಬಸವರಾಜು ಸಂತೇಶಿವರ ಇವರು ಒಂದು ಸರಳ ವಿಧಾನವನ್ನು ಬಳಸುತ್ತಿದ್ದಾರೆ. ಒಂದು ಹಿಡಿ ಸೀಗಡಿ ಅಥವಾ ಮೀನುಗಳು (ಸಣ್ಣ ಮೀನುಗಳು) ಬಟ್ಟೆಯಲ್ಲಿ ಕಟ್ಟಿ ತೆಂಗಿನ ಅಥವ ಅಡಿಕೆ ಮರಗಳ ಹೊಂಬಾಳೆ ಅಥವ ಗೊನೆಗಳಿಗೆ ತೂಗು ಹಾಕಿದರೆ ಅದರಿಂದ ಬರುವ ಗಬ್ಬು ವಾಸನೆಗೆ ಮಂಗಗಳು ತೋಟ ಬಿಟ್ಟು ಓಡಿ ಹೋಗುತ್ತವೆಯಂತೆ!

ಮಂಗಗಳು ತೆಂಗಿನ ಮರಗಳಲ್ಲಿ ಕಾಯಿ ಕಿತ್ತು ಎಳನೀರನ್ನು ಕುಡಿಯುತ್ತವೆ. ತೆಂಗಿನ ಕಾಯಿಯ ಸಿಪ್ಪೆ ತೆಳುವಾಗಿರುವ ಮರಗಳಿಗೆ ದಾಳಿ ಹೆಚ್ಚು. ಅಂತಹ ಮರಗಳನ್ನು ಗುರುತಿಸಿ ಸೀಗಡಿ ಮೀನಿನ ಗಂಟನ್ನು ಕಟ್ಟಿದರೆ ಮಂಗಗಳ ಕಾಟದಿಂದ ತಪ್ಪಿಸಿಕೊಳ್ಳುವುದನ್ನು ಸಂತೇಶಿವರರು ಕಂಡುಕೊಂಡಿರುವರು.

ವಿಳಾಸ: ಬಿ.ಬಸವರಾಜು ಸಂತೇಶಿವರ, ಚೆನ್ನಪಟ್ಟಣ ತಾಲ್ಲೂಕು, ಹಾಸನ

ಮಂಗಗಳ ಉಪದ್ರವಕ್ಕೆ ರಾಕೆಟ್ ದಾಳಿ

ಪಿವಿಸಿ ಪೈಪಿನ ಕೋವಿಯ ತುದಿಗೆ ರಾಕೆಟ್ (ದೀಪಾವಳಿಯಲ್ಲಿ ಸಿಡಿಸುವ ರಾಕೆಟ್) ಜೋಡಿಸಿ, ಮಂಗಗಳ ಗುಂಪು ಇರುವೆಡೆಗೆ ಗುರಿ ಮಾಡಿ ಬೆಂಕಿ ತಾಗಿಸಿ ಸಿಡಿಸಿದರೆ ಹೆದರಿ ಮಂಗಗಳು ದಿಕ್ಕಾಪಾಲಾಗುತ್ತವೆ. ಬೇರೆ ಬೇರೆ ವಿನ್ಯಾಸದ ಒಂದು ಅಡಿ ಅಳತೆಯ ಎರಡು ಪಿವಿಸಿ ಪೈಪುಗಳನ್ನು ಒಂದರಲ್ಲಿ ಒಂದನ್ನು ಸೇರಿಸಿ ಕೋವಿಯನ್ನು ತಯಾರಿಸಿ ಒಂದು ಸಲಕ್ಕೆ ನಾಲ್ಕೈದು ರಾಕೆಟ್ ಹಾರಿಸಬಹುದು. ಈ ಪ್ರಯೋಗವನ್ನು ಪುತ್ತೂರಿನ ಉದಯ್ ಎಂಬುವರು ಉಪಯೋಗಿಸಿದ್ದಾರೆ.

ಹಂದಿಗಳ ನಿಯಂತ್ರಣಕ್ಕೆ

ಅ) ಕ್ಷೌರಿಕನ ಅಂಗಡಿಯಲ್ಲಿ ಕತ್ತರಿಸಿದ ತಲೆಗೂದಲನ್ನು ತಂದು ಹಂದಿ ಬರುವ ದಾರಿಯಲ್ಲಿ ಹರಡಬೇಕು. ಹಂದಿ ಬರುವಾಗ ವಾಸನೆಯನ್ನು ತೆಗೆದುಕೊಂಡು ಉಸಿರೆಳೆಯುತ್ತಾ ಬರುವುದರಿಂದ ಅದರ ಮೂಗಿನೊಳಕ್ಕೆ ಕೂದಲು ಹೋಗುತ್ತದೆ. ನಂತರ ಹಂದಿಗಳು ಆ ಕಡೆ ಸುಳಿಯುವುದೇ ಇಲ್ಲ ಹಾಗೇ ಕೃಷಿ ಭೂಮಿಯ ಸುತ್ತಾ ಸಪೂರ ಸರಿಗೆಯನ್ನು ನೆಲದಿಂದ ಒಂದು ಅಡಿ ಎತ್ತರದಲ್ಲಿ ಒಂದು ಮತ್ತು ಒಂದೂವರೆ ಅಡಿ ಎತ್ತರದಲ್ಲಿ ಮತ್ತೊಂದನ್ನು ಸರಿಯಾಗಿ ಕಟ್ಟಿದರೆ ಹಂದಿಯು ಅದರೊಳಗೆ ಬರುವುದಿಲ್ಲ ಎಂದು ಪುತ್ತೂರು ತಾಲ್ಲೂಕಿನ ಅಶ್ವಿನಿಫಾರ್ಮನ ಮೋಹನ ಪ್ರಭು ಕೆ, ಸವಣೂರು ಇವರು ಹೇಳುತ್ತಾರೆ.

ಆ) ಇವರು ಇದೇ ರೀತಿ ಇನ್ನೊಂದು ವಿಧಾನವನ್ನು ಕಂಡುಕೊಂಡಿದ್ದಾರೆ. ಬಸ್ಸು, ಲಾರಿಗಳಲ್ಲಿ ಬೆಳಕಿನ ಪ್ರತಿಫಲನಕ್ಕಾಗಿ ಅಳವಡಿಸುವಂತಹ ರಿಫ್ಲೆಕ್ಟರುಗಳನ್ನು ತೋಟದ ಸುತ್ತಾ ಅಲ್ಲಲ್ಲಿ ನೆಲದಲ್ಲಿ ಅಳವಡಿಸಿದರೆ ರಾತ್ರಿ ತೋಟಕ್ಕೆ ನುಗ್ಗುವ ಕಾಡು ಹಂದಿ ಕಣ್ಣಿಗೆ ರಿಫ್ಲೆಕ್ಟರ್‌ಗಳಿಂದ ಪ್ರತಿಫಲನಗೊಳ್ಳುವ ಪ್ರತಿಬಿಂಬ ಬೆಂಕಿ ಉಂಡೆಗಳಂತೆ ಗೋಚರಿಸುವುದು ಎಂಬುದು ಅವರ ಅಭಿಮತ. ಈ ತಂತ್ರಜ್ಞಾನ ತೋಟಕ್ಕೆ ಬಾದಿಸುತ್ತಿದ್ದ ಕಾಡು ಹಂದಿ ಹಾವಳಿಯಿಂದ ಮುಕ್ತಿನೀಡಿದೆ ಎನ್ನುತ್ತಾರೆ.

ಇ) ಬೆಳೆದ ಪೈರಿಗೆ ಹಂದಿಗಳ ಕಾಟವಿದ್ದರೆ ಹೊಲದ ಸುತ್ತ ಅಂಗೈ ಅಗಲದ ಸುಣ್ಣದ ಚೂರನ್ನು ಅಲ್ಲಲ್ಲಿ ಇಟ್ಟರೆ, ನೆಲ ಮೂಸುತ್ತಾ ಹೊಲದತ್ತ ಬಂದ ಹಂದಿಗಳನ್ನು ಬಿಳಿ ಬಣ್ಣದ ಸುಣ್ಣ ಹಿಮ್ಮೆಟ್ಟಿಸುತ್ತದೆ ಎನ್ನುವುದೂ ಮತ್ತೊಂದು ಸರಳ ಕ್ರಮ.

ಮೂಲ: ಪ್ರಜಾವಾಣಿ, ಬುಧವಾರ, 14ನೇ ಸೆಪ್ಟೆಂಬರ್, 2005

ಎಲೆ ಸುರುಳಿ ರೋಗದ ನಿಯಂತ್ರಣ

ಗುಜರಾತಿನ ಭಾವನಗರದ ಪೊಪಟ್ ಬಾಯ್ ಎಂಬ ರೈತ ಎಲೆ ಸುರಳಿ ರೋಗಕ್ಕೆ ಸಮುದ್ರ ಕಳೆ (Algae - sea weed)ಯ ದ್ರಾವಣವನ್ನು ಬಳಸುತ್ತಿರುವುದಾಗಿ ತಿಳಿದು ಬಂದಿದೆ.

ಮೊದಲು ಸಮುದ್ರದ ಕಳೆಯನ್ನು ಸಂಗ್ರಹಿಸಿ ಒಣಗಿಸಿಡಲಾಗುತ್ತದೆ. ಬದನೆ ಅಥವಾ ಮೆಣಸಿನ ಬೆಳೆಗಳಲ್ಲಿ ರೋಗದ ಸೂಚನೆ ಕಂಡಾಗ, ಈ ಸಮುದ್ರ ಕಳೆಯನ್ನು ರಾತ್ರಿಯಿಡಿ ನೀರಿನಲ್ಲಿ ನೆನೆಸಿ ಬೆಳಿಗ್ಗೆ ಅದನ್ನು ಹಿಂಡಿ ದ್ರಾವಣವನ್ನು ಸಂಗ್ರಹಿಸಲಾಗುತ್ತದೆ. ಈ ದ್ರಾವಣ/ನೀರನ್ನು ಶೋಧಿಸಿ, ಸಿಂಪರಣಾ ಯಂತ್ರದ ಸಹಾಯದಿಂದ ರೋಗವಿರುವ ಬೆಳೆಗಳ ಮೇಲೆ ಪೋಪಟ್ ಬಾಯಿ ಸಿಂಪಡಿಸುತ್ತಾರೆ. ಈ ಕ್ರಮವನ್ನು ಅಹಮದಾಬಾದಿನ ಸಧ್ಭಾವ SRISTI ಸಂಶೋಧನಾ ಪ್ರಯೋಗಾಲಯದಲ್ಲಿ ಪರೀಕ್ಷಿಸಿದಾಗ ಶೇ 30–35 ರಷ್ಟು ರೋಗ ನಿಯಂತ್ರಣಕ್ಕೆ ಬಂದಿರುವುದು ಕಂಡು ಬಂದಿದೆ.

ಈ ಕ್ರಮವನ್ನು ಪೊಪಟ್ ಬಾಯ್ ಅವರು ತಮ್ಮ ಪೂರ್ವಿಕರಿಂದ ಕಲಿತಿರುವುದಾಗಿ ಇದನ್ನು ತಮ್ಮ ಗ್ರಾಮದ ಶೇ.20ರಷ್ಟು ರೈತರು ಅನುಸರಿಸುತ್ತಿರುವುದಾಗಿ ಹೇಳುತ್ತಾರೆ.

ಹತ್ತಿ ಬೆಳೆಯಲ್ಲಿ ಹೇನಿನ ನಿಯಂತ್ರಣ

ತಖಟ್‌ಸಿಂಗ್ ಪಟೇಲ್ ಎಂಬ ಗುಜರಾತಿನ ರೈತ ಹತ್ತಿಬೆಳೆಯಲ್ಲಿನ ಹೇನಿನ ನಿಯಂತ್ರಣಕ್ಕೆ ಈ ಕೆಳಗಿನ ಸಾವಯವ ಕೀಟನಾಶಕವನ್ನು ಕಂಡುಕೊಂಡಿದ್ದಾರೆ

ಹೊಂಗೆ *(Pongamia pinnata)* ಮತ್ತು ತಗ್ಗಿ ಗಿಡ *(Clerodendrum phlomides)* ಇವುಗಳ ಎಲೆಗಳನ್ನು ಕತ್ತರಿಸಿ, ನೀರಿನಲ್ಲಿ ಚೆನ್ನಾಗಿ ಕುದಿಸಿ ಆರಿಸಿ ನಂತರ ಕೀಟ ಬಾಧಿತ ಹತ್ತಿ ಬೆಳೆಗೆ ಸಿಂಪಡಿಸಿ ನಿಯಂತ್ರಿಸ ಬಹುದೆಂದು ಸಿಂಗ್ ಹೇಳುತ್ತಾರೆ. ಹೊಂಗೆ ಮತ್ತು ತಗ್ಗಿ ಗಿಡಗಳಿಗೆ ಎಂದಿಗೂ ಕೀಟಗಳು ಬೀಳದೆ ಇರುವುದನ್ನು ಗಮನಿಸುತ್ತಿದ್ದ ತಖಟ್‌ಸಿಂಗ್‌ರವರಿಗೆ ಈ ಆಲೋಚನೆ ಹೊಳೆಯಿತಂತೆ.

ಈ ವಿಧಾನವನ್ನೂ ಸಧ್ಭಾವ SRISTI ಸಂಶೋಧನಾ ಪ್ರಯೋಗಾಲಯವು ಕೋಡಿಯಾಲ ಗ್ರಾಮದಲ್ಲಿ ಪರೀಕ್ಷಿಸಿದಾಗ ಶೇ 50ರಷ್ಟು ನಿಯಂತ್ರಣ ಸಾಧ್ಯವಾಗಿರುವುದಾಗಿ ವರದಿಯಾಗಿದೆ.

ಅಣಬೆಗಳ ನಿಯಂತ್ರಣ

ನಿಂಬೆ ಜಾತಿಗೆ ಸೇರಿದ ಮರಗಳ ಮೇಲೆ ಮಳೆಗಾಲದಲ್ಲಿ (ಸೆಪ್ಟೆಂಬರ್–ನವೆಂಬರ್) ಅಣಬೆಗಳು ಬೆಳೆಯುವುದು ಸಾಮಾನ್ಯ. ಈ ಅಣಬೆಗಳನ್ನು ನಿಯಂತ್ರಿಸದಿದ್ದಲ್ಲಿ ಮರಗಳು ಸಾಯುತ್ತವೆ. ಸಾಮಾನ್ಯವಾಗಿ ಅಣಬೆಗಳ ನಿಯಂತ್ರಣಕ್ಕೆ ಬೋರ್ಡ್ಯಾಕ್ಸ್ ಮಿಶ್ರಣವನ್ನು ಬಳಸಲಾಗುತ್ತಿದೆ. ಈ ಮಿಶ್ರಣವು ಅಣಬೆಗಳ ಬೆಳವಣಿಗೆಯನ್ನು ನಿಯಂತ್ರಿಸಲು ಮೂರರಿಂದ ನಾಲ್ಕು ದಿನಗಳು ಬೇಕಾಗುತ್ತದೆ. ಆದರೆ ಕೇರಳದ ಪುಳಿಯಾಂಕುಡಿ ಗ್ರಾಮ, ತಿರುನೇಲ್ವೇಲಿ ಜಿಲ್ಲೆಯ ಅಂತೋಣಿ ಸ್ವಾಮಿಯವರು ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ಬಳಸಿ ಕೇವಲ ಮೂರು ಗಂಟೆಗಳಲ್ಲಿ ಈ ಅಣಬೆಯ ಬೆಳವಣಿಗೆಯನ್ನು ನಿಯಂತ್ರಿಸಬಹುದೆಂದು ತೋರಿಸಿಕೊಟ್ಟಿರುತ್ತಾರೆ.

ಎರಡು ಕಿ.ಗ್ರಾಂ. ಲೋಳೆಸರ *(Aloevera)* ಮತ್ತು ಒಂದು ಕಿ.ಗ್ರಾಂ ಬೆಳ್ಳುಳ್ಳಿಯನ್ನು ಸ್ವಲ್ಪ ನೀರಿನಲ್ಲಿ ಚೆನ್ನಾಗಿ ಅರೆದು ಪೇಸ್ಟ್ ರೀತಿಯಲ್ಲಿ ಮಾಡಿಕೊಂಡು ಅಣಬೆ ಬೆಳೆಯುತ್ತಿರುವ ಮರಗಳ ಭಾಗಗಳ ಮೇಲೆ ಸವರಿದರೆ ಕೇವಲ ಮೂರು ಗಂಟೆಗಳಲ್ಲಿ ಅಣಬೆಗಳ ಬೆಳವಣಿಗೆಯನ್ನು ನಿಯಂತ್ರಿಸಬಹುದೆಂದು ಅಂತೋಣಿ ಸ್ವಾಮಿಯವರು ಹೇಳುತ್ತಾರೆ.

ತೆನೆ ತಿಗಣೆ ನಿಯಂತ್ರಣ

ಮೇಲೆ ತಿಳಿಸಿದ ಮಿಶ್ರಣವನ್ನು ಭತ್ತಹಾಗೂ ಜೋಳದ ತೆನೆಗೆ ಬೀಳುವ ತಿಗಣೆಗಳ ನಿಯಂತ್ರಣಕ್ಕೂ ಬಳಸಬಹುದೆಂದು ಅಂತೋಣಿ ಸ್ವಾಮಿ ಹೇಳುತ್ತಾರೆ. ಈ ಮಿಶ್ರಣಕ್ಕೆ, 100 ಲೀಟರ್ ನೀರಿನಲ್ಲಿ ಒಂದು ಕಿ.ಗ್ರಾಂ ಮುತ್ತನಾರಿಯಾಲಿ *(Coleus aromaticus)* ಮತ್ತು ಒಂದು ಕಿ.ಗ್ರಾಂ ತುಳಸಿಯನ್ನು ಸೇರಿಸಿ, ಕೀಟ ಬಾಧೆಯಿರುವ ಬೆಳೆಗಳಿಗೆ ಸಿಂಪಡಿಸಿ ತೆನೆಗಳಲ್ಲಿನ ಕಾಳುಗಳನ್ನು ರಕ್ಷಿಸಬಹುದೆಂದು ಇವರು ಹೇಳುತ್ತಾರೆ.

*ಮೂಲ: **Honeybee, Vol. 16(2), April-June, 2005***

ಬೇರು ತಿನ್ನುವ ಹುಳುಗಳ ನಿಯಂತ್ರಣ

ಬೇರು ತಿನ್ನುವ ಹುಳುಗಳು (Root grubs) ಎಲ್ಲೆಡೆಯಿರುತ್ತವೆ. ಇವುಗಳ ವಿಪರೀತ ಹಾವಳಿಯಿಂದ ಗಿಡಗಳು ಸಾಯುತ್ತವೆ ಇದರಿಂದ ರೈತರಿಗೆ ಗಣನೀಯ ನಷ್ಟವಾಗುವುದುಂಟು. ಇವುಗಳ ನಿಯಂತ್ರಣಕ್ಕೆ ವಾಸುದೇವ ಅದಮಾರರು ಸರಳ ಹಾಗೂ ಪರಿಣಾಮಕಾರಿಯಾದ ವಿಧಾನವನ್ನು ತಿಳಿಸಿರುತ್ತಾರೆ.



ಮಡಕೆಗಳಿಗೆ ಸುತ್ತಲೂ ತೂತುಗಳನ್ನು ಮಾಡಿ, ಸಗಣಿ ಮತ್ತು ಜೋಳದ ದಿಂಡನ್ನು ಬೆರೆಸಿ ಮಡಿಕೆಯಲ್ಲಿ ತುಂಬಬೇಕು. ನಂತರ ಅದರ ಬಾಯನ್ನು ಬಟ್ಟೆಯಿಂದ ಕಟ್ಟಬೇಕು. ಜಮೀನಿನಲ್ಲಿ ಅಲ್ಲಲ್ಲಿ ಮಡಿಕೆ ಮುಳುಗುವಷ್ಟು ಆಳದ ಗುಂಡಿಗಳನ್ನು ತೆಗೆದು, ತಯಾರಿಸಿಟ್ಟ ಮಡಿಕೆಗಳನ್ನು ಹೂತಿಡಬೇಕು. ಬೇರು ಹುಳುಗಳು ಸಗಣಿ ಮತ್ತು ಜೋಳದ ದಿಂಡಿನ ಮಿಶ್ರಣದಿಂದ ಆಕರ್ಷಣೆಗೊಂಡು ಮಡಿಕೆಯನ್ನು ಸೇರುತ್ತವೆ. ಈ ರೀತಿ ಸಂಗ್ರಹವಾದ ಹುಳುಗಳನ್ನು 10–15 ದಿನಗಳಿಗೊಮ್ಮೆ ಮಡಿಕೆಗಳನ್ನು ಹೊರ ತೆಗೆದು ಹುಳುಗಳನ್ನು ನಾಶಗೊಳಿಸಬಹುದು


ಮೂಲ: ಪ್ರಜಾವಾಣಿ, 20.07.2005

ಅನಂತರಾಜ್ ಬೊಮ್ಮರಸಯ್ಯನವರ ಸರಳ ಸ್ಪ್ರಿಂಕ್ಲರ್‌ಗಳು



ಮಧ್ಯಮ ವರ್ಗದ ಕೃಷಿಕರ ಸಮಸ್ಯೆಗಳು ಅನೇಕ. ದುಬಾರಿಯಾಗಿರುವ ಕೃಷಿ ತಂತ್ರಜ್ಞಾನ ಇವುಗಳಲ್ಲಿ ಒಂದು. ಆದರೆ ಕೆಲವು ಬುದ್ಧಿವಂತ ರೈತರು ಇಂತಹ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸುತ್ತಿದ್ದಾರೆ. ಇಂತಹವುಗಳಲ್ಲಿ ಶಿವಮೊಗ್ಗದ ತೀರ್ಥಹಳ್ಳಿ ತಾಲ್ಲೂಕಿನ ಅನಂತರಾಜ್ ಕೆ.ವಿ ಬೊಮ್ಮರಸಯ್ಯನ ಅಗ್ರಹಾರ ಇವರ 'ಸರಳ ಸ್ಪ್ರಿಂಕ್ಲರ್' ಒಂದು.

ಅನಂತರಾಜರ ಐದು ಎಕರೆ ವ್ಯಾಪ್ತಿಯ ಜಮೀನಿನಲ್ಲಿ ಅಡಿಕೆಯೆ ಪ್ರಮುಖ ಬೆಳೆ. ಇದರ ಜೊತೆಗೆ ಬಾಳೆ, ಕಾಫಿ, ಮೆಣಸು ಹಾಗು ವೆನಿಲ್ಲಾ ಬೆಳೆಗಳಿದ್ದು ಕಂಪನಿ ಸ್ಪ್ರಿಂಕ್ಲರ್‌ಗಳನ್ನೆ ಬಳಸುತ್ತಿದ್ದರು. ಕಂಪನಿ ಸ್ಪ್ರಿಂಕ್ಲರ್‌ಗಳು ಮೂರು ದಿನಗಳಿಗೊಮ್ಮೆ ಕೈಕೊಡುತ್ತಿದ್ದವು. ಅಲ್ಲದೆ, ಕಂಪನಿಯ ಮೈಕ್ರೋ ಸ್ಪ್ರಿಂಕ್ಲರ್‌ನ್ನು ನೋಡಿ ಸ್ಪ್ರಿಂಗ್ ಇಲ್ಲದ ಸರಳ ಸ್ಪ್ರಿಂಕ್ಲರ್ ತಯಾರು ಮಾಡಬೇಕೆಂಬ ಕಲ್ಪನೆ ಮೂಡಿತು ಎಂದು ಅನಂತ್‌ರವರು ಹೇಳುತ್ತಾರೆ.



ಈ ಸರಳ ಸ್ಪ್ರಿಂಕ್ಲರ್‌ನ್ನು ರೈತರೇ ಅತೀ ಕಡಿಮೆ ಖರ್ಚಿನಲ್ಲಿ ತಯಾರಿಸಿಕೊಳ್ಳಬಹುದಾಗಿದೆ. ಕೇವಲ ಪಿ.ವಿ.ಸಿ ಪೈಪ್, ಎಲ್‌ಬೋ ಬೆಂಡ್, ಹಾಗೂ ಕೆಲವು ಅನುಪಯುಕ್ತವಸ್ತುಗಳಾದ ನಶ್ಯ ಡಬ್ಬಿ, ಸ್ನಾನಕ್ಕೆ ಬಳಸುವ ಶವರ್ (ತುಂತುರು), ಮ್ಯಾಂಗೋ ಐಸ್ ಕ್ರೀಂ ಖಾಲಿ ರ್‍ಯಾಪರ್‌ಗಳನ್ನು ಬಳಸಿ ವಿವಿಧ ರೀತಿಯ ಸ್ಪ್ರಿಂಕ್ಲರ್‌ಗಳನ್ನು ಅನಂತರಾಜ್‌ರವರು ಮಾಡಿ, ಉಪಯೋಗಿಸಿ ತೋರಿಸಿದ್ದಾರೆ.

1. ಒಂದು ಶವರ್‌ನ ಸ್ಪ್ರಿಂಕ್ಲರ್: ಈ ಸ್ಪ್ರಿಂಕ್ಲರ್‌ನಲ್ಲಿ ಒಂದು ಶವರ್‌ನ್ನು ಮುಕ್ಕಾಲು ಇಂಚು ಪೈಪು ಹಾಗೂ ಅರ್ಧ ಇಂಚು ಪೈಪ್‌ಗೆ ಅರ್ಧ ಇಂಚು ಎಲ್ಬೋ, ಮುಕ್ಕಾಲು ಇಂಚು ಎಂ.ಟಿ.ಎ. ಅರ್ಧ ಇಂಚು ಟಿ ಇವುಗಳನ್ನು ಜೋಡಿಸಿದ್ದಾರೆ. ಈ ಸ್ಪ್ರಿಂಕ್ಲರ್ 18 ಅಡಿ ದೂರದವರೆಗೆ ನೀರನ್ನು ಚಿಮ್ಮುತ್ತದೆ. ಇದಕ್ಕೆ 30 ರೂಪಾಯಿ ಖರ್ಚಾಗುತ್ತದೆ.

2. ಎರಡು ಶವರ್ ಸ್ಪ್ರಿಂಕ್ಲರ್: ಎರಡು ಶವರ್‌ಗಳನ್ನು ಜೋಡಿಸಿ ತಿರುಗುವಂತೆ ಮಾಡಿದ್ದಾರೆ. ಈ ಸ್ಪ್ರಿಂಕ್ಲರ್‌ನಿಂದ 12 ಅಡಿಯವರೆವಿಗೂ ನೀರು ಹೋಗುತ್ತದೆ. ಇದಕ್ಕೆ 50 ರೂಪಾಯಿ ಖರ್ಚಾಗುತ್ತದೆ.

3. ಮ್ಯಾಂಗೋ ಐಸ್ ಕ್ರೀಂ ಸ್ಪ್ರಿಂಕ್ಲರ್: ಮ್ಯಾಂಗೋ ಐಸ್ ಕ್ರೀಂನ ಖಾಲಿ ರ್‍ಯಾಪರ್‌ಗೆ ಸಣ್ಣ ರಂಧ್ರಗಳನ್ನು ಮಾಡಿ ತಯಾರಿಸಿದ್ದಾರೆ. ಈ ಸ್ಪ್ರಿಂಕ್ಲರ್‌ನಿಂದ 18 ಅಡಿ ದೂರದವರೆವಿಗೂ ತಿರುಗುತ್ತಾ ನೀರು ಬೀಳುತ್ತದೆ. ಇದಕ್ಕೆ 15ರೂಪಾಯಿ ಖರ್ಚಾಗುತ್ತದೆ.

4. ನಶ್ಯ ಡಬ್ಬಿಯ ಸ್ಪ್ರಿಂಕ್ಲರ್: ಈ ಸ್ಪ್ರಿಂಕ್ಲರ್‌ಗೆ ಪೈಪ್‌ನ ಮಧ್ಯದಲ್ಲಿ ಒಂದೊಂದು ಬದಿ ಒಂದೊಂದು ನಶ್ಯದ ಡಬ್ಬಿಯನ್ನಿಟ್ಟು ಅದಕ್ಕೆ ರಂಧ್ರ ಮಾಡಿ ಲಾಲಿಪಾಪ್ ಚಾಕ್‌ಲೇಟ್‌ನ ಸ್ಟ್ರಾವನ್ನು ಅಳವಡಿಸಿದ್ದಾರೆ. ಹಾಗೆಯೇ ಮತ್ತೊಂದು ಬದಿಗೆ ಮಕ್ಕಳು ಆಡುವ ಪೀಪಿಯನ್ನು ಅಳವಡಿಸಿದ್ದಾರೆ. ಈ ಸ್ಪ್ರಿಂಕ್ಲರ್ 20 ಅಡಿಯವರೆಗೆ ನೀರನ್ನು ತಿರುಗಿಸುತ್ತಾ ಹಾರಿಸುತ್ತದೆ. ಇದಕ್ಕೆ 15 ರೂಪಾಯಿ ಖರ್ಚಾಗುತ್ತದೆ.

ಈ ಸರಳ ಸ್ಪ್ರಿಂಕ್ಲರ್‌ಗಳು ಅತ್ಯಂತ ಕಡಿಮೆ ಖರ್ಚಿನಲ್ಲಾಗುತ್ತವೆ. 40–60 ಜೆಟ್‌ಗಳು ಒಂದು ಸುತ್ತು ಸುತ್ತುವುದರೊಳಗೆ ಈ ಸರಳ ಸ್ಪ್ರಿಂಕ್ಲರ್‌ಗಳು 50 ಸುತ್ತು ಸುತ್ತುತ್ತವೆ. 30 ಅಡಿ ಅಂತರಗಳಲ್ಲಿ ಈ ಸ್ಪ್ರಿಂಕ್ಲರ್‌ಗಳನ್ನು ಅಳವಡಿಸಿ 4 ಗಂಟೆಗಳಲ್ಲಿ ಬಿಡುವ ನೀರನ್ನು 2 ಗಂಟೆಗಳಲ್ಲಿ ಬಿಡಬಹುದು. ಈ ಸ್ಪ್ರಿಂಕ್ಲರ್‌ಗಳನ್ನು ಗಮ್ ಉಪಯೋಗಿಸದೇ ಕೇವಲ ಪ್ಲಾಸ್ಟಿಕ್ ಸುತ್ತಿ ಪೈಪುಗಳನ್ನು ನಿಲ್ಲಿಸಿರುವುದಾಗಿ ಅನಂತರಾಜುರವರು ಹೇಳುತ್ತಾರೆ. ಇವರು ತಮ್ಮ ತೋಟದಲ್ಲಿ ಹಲವಾರು ವರ್ಷಗಳಿಂದ ಕಡಿಮೆ ಖರ್ಚಿನಲ್ಲಿ ಬೆಳೆಗಳಿಗೆ ಈ ತಮ್ಮ ಶೋಧನೆಯನ್ನೇ ಬಳಸಿ ನೀರುಣಿಸುತ್ತಿದ್ದಾರೆ. ಬೇರೆಯವರೂ ಈ ವಿಧಾನ ಬಳಸಿ, ನೀರಿನ ಮತ್ತು ಹಣದ ಮಿತ ಬಳಕೆ ಮಾಡಬಹುದೆಂದು ಹೇಳುತ್ತಾರೆ.

(ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗುವುದು)

ವಿಶೇಷ ಸೂಚನೆ

- *ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.*
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ 'ಹಿತ್ತಲಗಿಡ' ಜವಾಬ್ದಾರಿಯಲ್ಲ.

- ಸಂಪಾದಕ

ಅಣ್ಣೇಗೌಡರ ರೋಗ ಮುಕ್ತ ಚಂದ್ರಿಕೆ

ಲೇಖಕ: ಸಿದ್ದರಾಮೇಗೌಡ

ರೇಷ್ಮೆ ಕೃಷಿಕರಾದ ಶ್ರೀ ಅಣ್ಣೇಗೌಡರು ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಮಲ್ಲಿಕಾರ್ಜುನಪುರದಲ್ಲಿ ಕಳೆದ 15 ವರ್ಷಗಳಿಂದ ತಮ್ಮ ಮೂರು ಎಕರೆ ಭೂಮಿಯಲ್ಲಿ ಒಂದೂವರೆ ಎಕರೆ ಪ್ರದೇಶದಲ್ಲಿ ಹಿಪ್ಪು ನೇರಳೆ ತೋಟ ಹೊಂದಿದ್ದು ಅನೇಕ ಬಾರಿ ಏಳುಬೀಳುಗಳ ನಡುವೆ ರೇಷ್ಮೆ ಕೃಷಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.



ರೇಷ್ಮೆ ಕೃಷಿ ಅತಿ ಸೂಕ್ಷ್ಮ ನಿರ್ವಹಣೆ ಅಗತ್ಯವಿರುವ ಕಸುಬಾಗಿದೆ. ಈ ನಿಟ್ಟಿನಲ್ಲಿ ಗೌಡರಿಗೆ ರೇಷ್ಮೆ ಮೊಟ್ಟೆಗಳನ್ನು ಸಾಕಿ ಉತ್ತಮ ಗೂಡು ಪಡೆಯುವಲ್ಲಿ ಆಧುನಿಕ ವಿಧಾನಗಳನ್ನು ಅನುಸರಿಸುವುದು ದುಬಾರಿಯಾಗುತ್ತಿತ್ತು. ಬಿದಿರಿನ ಚಂದ್ರಿಕೆಗೆ ದುಬಾರಿ ಬೆಲೆ, ಬಾಳಿಕೆ ಕಡಿಮೆ, ಜೊತೆಗೆ ಸಂಗ್ರಹಿಸಲು ಜಾಗದ ಕೊರತೆ, ಇಲಿಗಳ ಕಾಟ, ರೋಗಾಣುಗಳು ಹೆಚ್ಚಾಗಿ ಬೆಳೆ ಹಾಳು. ಇದಕ್ಕೆ ಹೆಚ್ಚು ಕ್ರಿಮಿನಾಶಕ ಸಿಂಪಡಿಸಬೇಕು. ರೋಗಾಣುಗಳನ್ನು ಕಡಿಮೆಗೊಳಿಸಲು ಚಂದ್ರಿಕೆಗಳನ್ನು ಬಿಸಿಲಿಗೆ ಇಟ್ಟರೆ ಒಣಗಿ ಬಾಳಿಕೆ ಕಡಿಮೆ, ಹಾಗೂ ಇತ್ತೀಚಿನ ಪ್ಲಾಸ್ಟಿಕ್ ಚಂದ್ರಿಕೆಗಳು ಇನ್ನೂ ದುಬಾರಿ. ಜೊತೆಗೆ ನಿರ್ವಹಣೆಯಲ್ಲಿ ಶ್ರಮ ಮತ್ತು ಸಮಯ ವ್ಯರ್ಥವಾಗುತ್ತಿತ್ತು. ಈ ನಡುವೆ ರೇಷ್ಮೆಗೂಡಿನ ಬೆಲೆ ಕುಸಿಯಿತು. ಹಾಗೆಯೆ, ಕೂಲಿಕಾರರ ಅಭಾವದಿಂದ ರೇಷ್ಮೆ ಹುಳು ಸಾಕಣೆ ಮತ್ತು ನಿರ್ವಹಣೆ ಕಷ್ಟಕರವಾಗಿ ಕಂಡದ್ದರಿಂದ ಸೂಕ್ತ, ಸರಳ ಹಾಗೂ ಸಾಂಪ್ರದಾಯಿಕ ವಿಧಾನಗಳನ್ನು ಸುಧಾರಿಸಿಕೊಂಡರೆ ಹೇಗೆ ಎಂಬ ಆಲೋಚನೆಯಲ್ಲಿದ್ದಾಗ ಗೌಡರಿಗೆ ಹಿಪ್ಪು ನೇರಳೆ ಕಡ್ಡಿಗಳಿಂದಲೇ ಚಂದ್ರಿಕೆ ತಯಾರಿಕೆಯ ಉಪಾಯ ಹೊಳೆಯಿತು.

ರೇಷ್ಮೆ ಕೃಷಿಯಲ್ಲಿಯೆ ಲಭ್ಯವಾಗುವ ಹಿಪ್ಪು ನೇರಳೆಯ ಕಡ್ಡಿಗಳನ್ನು ಒಂದು ಗೇಣಿಗೆ ಒಂದರಂತೆ ಕತ್ತರಿಸಿಕೊಂಡು ಹಗ್ಗ/ ದಾರದ ಜೊತೆಯಲ್ಲಿ ನೇಯ್ದು ಕಡ್ಡಿ ಚಂದ್ರಿಕೆಯನ್ನು ತಯಾರಿಸಿದರು. ಮಹಿಳೆಯರೆ ತಯಾರಿಸಬಹುದಾದ ಸರಳ ಚಂದ್ರಿಕೆಗಳು ಇವು. ಹಣ್ಣಾದ ಹುಳುಗಳು ಗೂಡು ಕಟ್ಟಲು ಸೂಕ್ತ ಜಾಗದ ಹುಡುಕಾಟದಲ್ಲಿರುತ್ತವೆ. ಈ ಸಮಯದಲ್ಲಿ ಚಂದ್ರಿಕೆಗಳನ್ನು ಸ್ಲ್ಯಾಬ್/ತಟ್ಟೆಯ ಅಂಚಿನಿಂದ ಒಂದು ಅಡಿ ಅಂತರದಲ್ಲಿ ಇಟ್ಟರೆ ಅವು ಈ ಕಡ್ಡಿ ಚಂದ್ರಿಕೆಯಲ್ಲಿ ಹತ್ತಿ ಗೂಡು ಕಟ್ಟಿಕೊಳ್ಳುತ್ತವೆ. ಹಾಗಾಗಿ ಹಣ್ಣಾದ ಹುಳುಗಳನ್ನು ಆರಿಸಿ ಚಂದ್ರಿಕೆಗೆ ಬಿಡುವ ಅವಶ್ಯಕತೆಯಿರುವುದಿಲ್ಲ. ಚಂದ್ರಿಕೆಯಿಂದ ಗೂಡು ತೆಗೆಯುವುದು ತುಂಬಾ ಸುಲಭ ಮತ್ತು ಅನುಕೂಲಕರ ಹಾಗೂ ಗೂಡು ಕೆಡುವುದಿಲ್ಲ. ಹೆಚ್ಚಿನ ಬಂಡವಾಳ ಬೇಕಾಗಿಲ್ಲ. ಆರು ಅಡಿ ಉದ್ದದ ಚಂದ್ರಿಕೆಯನ್ನು ತಯಾರಿಸಲು ನಾಲ್ಕು ರೂಪಾಯಿಯ ದಾರ ಸಾಕಾಗುತ್ತದೆಯೆಂದು ಹೆಮ್ಮೆಯಿಂದ ಗೌಡರು ತಮ್ಮ ಶೋಧನೆಯ ಬಗ್ಗೆ ಹೇಳುತ್ತಾರೆ.

ತಯಾರಿಕೆಯ ವಿಧಾನ: ನೇಯುವ ಮಣೆಯನ್ನು '+' ಆಕಾರದಲ್ಲಿ ತಯಾರಿಸಿಕೊಂಡು ಜೋಡಿಸಬೇಕು. ಈ ಮಣೆಯನ್ನು ಮೂರು ಅಡಿಯ ಅಂತರದಲ್ಲಿ ನೆಟ್ಟಿರುವ ಆಧಾರ ಸ್ತಂಭಕ್ಕೆ ಜೋಡಿಸಿ, ನಂತರ ಮಣೆಯ ತುದಿಯ ನಾಲ್ಕು ಕೊಕ್ಕೆಗಳಿಗೂ ದಾರಗಳನ್ನು ಸೇರಿಸಿ (ಚಂದ್ರಿಕೆಯ ಅಳತೆಯನ್ನು ಅವಲಂಬಿಸಿ) ದಾರದ ಇನ್ನೊಂದು ತುದಿಗಳನ್ನು ಒಟ್ಟುಗೂಡಿಸಿ ಒಂದು ಆಧಾರಕ್ಕೆ ಕಟ್ಟಬೇಕು. ನಂತರ ಒಬ್ಬರು ಹ್ಯಾಂಡಲ್‌ನ್ನು ತಿರುಗಿಸುತ್ತಿದ್ದರೆ ಮತ್ತೊಬ್ಬರು ಮೊದಲೆ ಕತ್ತರಿಸಿಟ್ಟುಕೊಂಡಿದ್ದ ಕಡ್ಡಿಗಳನ್ನು ನೇಯುತ್ತಿರುವ ದಾರಕ್ಕೆ ಒಂದರ ಪಕ್ಕದಲ್ಲಿ ಒಂದರಂತೆ ಸೇರಿಸುತ್ತಾ ಬರಬೇಕು. ಹೀಗೆ ತಮಗೆ ಎಷ್ಟು ಉದ್ದದ ಚಂದ್ರಿಕೆ ಬೇಕೋ ಅಷ್ಟು ಉದ್ದದ ಚಂದ್ರಿಕೆಯನ್ನು ತಯಾರಿಸಿ ಕೊಳ್ಳಬಹುದು. ಐದು ನಿಮಿಷಗಳಲ್ಲಿ 10 ಅಡಿ ಉದ್ದದ ರೋಗಮುಕ್ತವಾದ ಚಂದ್ರಿಕೆಯನ್ನು ಸರಳವಾಗಿಯೇ ತಯಾರಿಸಿಕೊಳ್ಳಬಹುದೆಂದು ಗೌಡರು ಹೇಳುತ್ತಾರೆ.

(ಈ ಅನುಶೋಧನೆಯನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಗೆ ಕಳುಹಿಸಲಾಗಿದೆ)

ದೇಶೀಯ ಹತೋಟಿ

ಸಸ್ಯ ಹೇನಿಗೆ ದೊಣ್ಣೆ ಮೆಣಸಿನ ದ್ರಾವಣ

ಬೀದರ್ ಜಿಲ್ಲೆ ಔರಾದದ ಸಸ್ಯ ತಜ್ಞ ಡಾ. ಸುಧಾಕರರವರು ಅವರೆ, ಹೆಸರು, ತೊಗರಿ ಮುಂತಾದ ಬೆಳೆಗಳಲ್ಲಿ ಕಂಡು ಬರುವ, ರಸ ಹೀರುವ ಹೇನು ಕೀಟಗಳ ನಿಯಂತ್ರಣಕ್ಕೆ ದೊಣ್ಣೆ ಮೆಣಸಿನ ಕಾಯಿಯ ದ್ರಾವಣದ ಬಳಕೆಯ ಒಂದು ದೇಶೀಯ ಕ್ರಮ ತಿಳಿಸಿದ್ದಾರೆ.

ಒಂದು ಲೀಟರ್ ನೀರಿಗೆ 50 ಗ್ರಾಂ ಮೆಣಸಿನ ಪುಡಿಯನ್ನು ಸೇರಿಸಿ ಚೆನ್ನಾಗಿ ಕುದಿಸಿ, ಆರಿಸಿ ಬೆಳಗ್ಗೆ 10 ರಿಂದ ಮಧ್ಯಾಹ್ನ ಎರಡು ಗಂಟೆಯ ಅವಧಿಯೊಳಗೆ ಸಿಂಪಡಿಸಬೇಕು. ಈ ರೀತಿ 5 ದಿನಗಳ ಅಂತರದಲ್ಲಿ ಎರಡರಿಂದ ಮೂರು ಬಾರಿ ಸಿಂಪಡಿಸಿದರೆ ಶೇ 90ರಷ್ಟು ಸಸ್ಯ ಹೇನು ನಿಯಂತ್ರಣ ಮಾಡಬಹುದು ಎಂಬುದನ್ನು ಡಾ. ಸುಧಾಕರರವರು ತಮ್ಮ ಮಿತ್ರ ರಮೇಶರ ಹೊಲದಲ್ಲಿ ಪರೀಕ್ಷಿಸಿ ನೋಡಿರುತ್ತಾರೆ.

ಮೂಲ: ಪ್ರಜಾವಾಣಿ 17.11.2004

ಭತ್ತದ ಕಂದು ಜಿಗಿ ಹುಳುವಿನ ನಿಯಂತ್ರಣಕ್ಕೆ

ಕೇರಳದ ಪೌಲ್‌ಸನ್ ಎಂಬುವರು ಭತ್ತದ ಕಂದು ಜಿಗಿ ಹುಳುವಿನ ನಿಯಂತ್ರಣಕ್ಕೆ ಜೈವಿಕ ಕೀಟನಾಶಕವನ್ನು ಕಂಡು ಕೊಂಡಿದ್ದಾರೆ. ಬೆಳೆಯಲ್ಲಿ ಕೀಟ ಕಂಡ ತಕ್ಷಣ ನಂಜಿನ ಕೊರಡು / ಕಾಸರ್ಕನ ಮರ / ವಿಷ ಮುಷ್ಟಿ *(Strychnos nuxvomica)* / ತುಳಸಿ ಮತ್ತು ಅರಿಶಿಣದ ಎಲೆ. ಇವುಗಳನ್ನು ನೀರಿನಲ್ಲಿ ಕುದಿಸಿ, ಭತ್ತದ ಬೆಳೆಗೆ ಸಿಂಪಡಿಸಿದರೆ ರೋಗ ಹತೋಟಿಗೆ ತರಬಹುದಂತೆ.

Honey Bee, Vol.16(1), Jan.-March, 05

'ಇಬ್ಬೀಡು' - ಹಲಸಿನ ಬೀಡು

ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು ಇಬ್ಬೀಡು ಗ್ರಾಮದಲ್ಲಿ ಹೇರಳವಾಗಿ ಹಲಸಿನ ಕೃಷಿ ನಡೆಯುತ್ತಿದ್ದು, ಇಲ್ಲಿ ಎರಡು ನೂರು ವರ್ಷಗಳ ಕಾಲದ ಹಲಸಿನ ಮರಗಳು ಇವೆಯಂತೆ. ಇಲ್ಲಿಯ ಒಂದು ಹಲಸಿನ ಮರ ಮೈಸೂರು ಮಹಾರಾಜರ ಆಸ್ಥಾನಕ್ಕೆ ಹಣ್ಣಿಗಾಗಿ ಮೀಸಲಾಗಿತ್ತು ಎಂದು ತಿಳಿಸಿರುವ ಈ ಗ್ರಾಮದ ಎ. ಆರ್. ನಾರಾಯಣ ಸ್ವಾಮಿಯವರು ಇವರು ಚಿಕ್ಕವನಿದ್ದಾಗ ಇಲ್ಲಿನ ಹಲಸಿನ ಸವಿ ಹಣ್ಣನ್ನು ತಿಂದು ಮೂರು ದಿನಗಳ ನಂತರ ನಾಲಿಗೆಯನ್ನು ತುಟಿಗೆ ಸವರಿದರೆ ಆ ರುಚಿ ನಾಲಿಗೆಗೆ ಮತ್ತೆ ಸಿಗುತ್ತಿತ್ತು ಎನ್ನುತ್ತಾರೆ. ಇಬ್ಬೀಡು ಎರಡು ನೂರು ಮನೆಗಳಿರುವ ಗ್ರಾಮ. ಈ ಗ್ರಾಮಕ್ಕೆ ಸೇರಿದ ಎಂಟು ನೂರು ಎಕರೆ ಜಮೀನಿನಲ್ಲಿ ಎರಡು ಸಾವಿರಕ್ಕೂ ಹೆಚ್ಚು ಹಲಸಿನ ಮರಗಳಿವೆ. ಅಷ್ಟೇ ಮಾವಿನ ಮರಗಳೂ ಕೂಡ ಇವೆ. ವಿಶೇಷವಾಗಿ ಹಲಸಿನ ಹಣ್ಣಿಗೆ ಇಬ್ಬೀಡು ಹೆಸರುವಾಸಿಯಾಗಿದೆ. ಒಂದೊಂದು ಕುಟುಂಬದಲ್ಲಿ ಹತ್ತರಿಂದ ಹದಿನೈದು ಹಲಸಿನ ಮರಗಳನ್ನು ಹೊಂದಿದ್ದಾರೆ. ಹೊಲದ ಬದುವಿನ ಸುತ್ತ ಹಿತ್ತಲು ಮತ್ತು ಮನೆಯ ಹಿಂದೆ ಮುಂದೆಲ್ಲಾ ಬೆಳೆಸಿಕೊಂಡಿರುತ್ತಿದ್ದು ಅದರಲ್ಲೂ ಅಂಟು ಇಲ್ಲದ ಮರಗಳು, ರುದ್ರಾಕ್ಷಿ, ಚಂದ್ರ, ಬಿಳಿ, ಹೀಗೆ ಇನ್ನೂ ಕೆಲವು ಜಾತಿಯ ಹಲಸಿನ ಮರಗಳಿವೆ. ವರ್ಷ ಪೂರ ಹಣ್ಣು ಬಿಡುವ ಕೆಲವು ಮರಗಳೂ ಕೂಡ ಇವೆ.

ಹಲಸಿನ ಮರದಲ್ಲಿ ಹೆಚ್ಚು ಹೆಚ್ಚು ಹಣ್ಣು ಬಿಡಲು ಈ ಗ್ರಾಮದವರು ಒಂದು ಉಪಾಯವನ್ನು ಕಂಡುಕೊಂಡಿರುವರು. ಮರದಲ್ಲಿ ಜೊಲ್ಲು ರೆಂಬೆ ಕತ್ತರಿಸಿ ಕುಡಗೋಲಿನಿಂದ ಅರ್ಧ ಇಂಚು ಆಳಕ್ಕೆ ಬುಡದಿಂದ ಕೊನೆವರೆಗೂ ಅಲ್ಲಲ್ಲಿ ಕಚ್ಚು ಹಾಕುವದರಿಂದ ಮರದ ತೊಗಟೆಯಲ್ಲಿ ಗಂಟು ರೀತಿ ಉಂಟಾಗಿ ಹಲಸಿನ ಮೊಗ್ಗು ಬಿಡಲು ಪ್ರಾರಂಭಿಸುತ್ತವೆ ಎಂದು ನಾರಾಯಣ ಸ್ವಾಮಿಯವರು ಹೇಳುತ್ತಾರೆ. ಇದೇ ಗ್ರಾಮದ ಬಸವರಾಜು ಅವರ ಹಲಸಿನ ಮರದಲ್ಲಿ ಅರವತ್ತು ಕಿಲೊಗೂ ಹೆಚ್ಚು ತೂಗುವ ಹಣ್ಣು ಬಿಟ್ಟಿರುತ್ತದೆ. ಈ ಹಣ್ಣನ್ನು ನೂರಾ ಇಪ್ಪತ್ತೈದು ರೂಪಾಯಿಗಳಿಗೆ ಮಾರಿರುತ್ತಾರೆ ಎನ್ನುತ್ತಾರೆ.

ಹಲಸಿನ ಸಸಿ ನಾಟಿ ಮಾಡಿದ ಅಥವಾ ಬೀಜ ಹಾಕಿದ ಮೂರು ವರ್ಷಕ್ಕೆ ಹಣ್ಣು ಬಿಡಲು ಪ್ರಾರಂಭಿಸುತ್ತವೆ. ಹತ್ತು ವರ್ಷದ ಮರ 500ಕ್ಕೂ ಹೆಚ್ಚು ಹಣ್ಣು ಬಿಡಲು ಪ್ರಾರಂಬಿಸುತ್ತದೆ. ಒಂದೊಂದು ಗೂಂಚಲಲ್ಲಿ 8–10 ಕಾಯಿಗಳು ಬಿಡುತ್ತವೆ. ಈ ರೀತಿ ಗೊಂಚಲಲ್ಲಿ ಕಾಯಿಗಳೂ ಹೆಚ್ಚಾದರೆ ಹಣ್ಣು ದಪ್ಪವಾಗುವುದಿಲ್ಲ ಆದ್ದರಿಂದ ಒಂದೊಂದು ಗೊನೆಯಲ್ಲಿ ಕಾಯಿಯ ತೊಟ್ಟು ದಪ್ಪವಾಗಿರುವ ಮೂರು ಅಥವಾ ನಾಲ್ಕು ಬಿಟ್ಟು ಉಳಿದವನ್ನೆಲ್ಲ ಎಳಸಿರುವಾಗಲೆ ಅಡಿಗೆಗೆ ತರಕಾರಿಯಾಗಿ ಮಾರುತ್ತಾರೆ. ಒಂದು ಎಳಸು ಕಾಯಿಗೆ ಮೂರು ರೂಪಾಯಿಯಿಂದ ನಾಲ್ಕು ರೂಪಾಯಿಯವರೆಗೆ ಬೆಲೆ ಇದ್ದು ವ್ಯಾಪಾರಸ್ಥರು ಈ ಗ್ರಾಮಕ್ಕೆ ಬಂದು ಎಳಸು ಕಾಯಿಗಳನ್ನು ತರಕಾರಿಯಾಗಿಯೂ ಲಾರಿಗಟ್ಟಲೆ ಕೊಂಡು ಮಾರಾಟ ಮಾಡುತ್ತಾರೆ. ಒಬ್ಬ ರೈತ ಹತ್ತು ಮರದಿಂದ ಕನಿಷ್ಠ ನಾಲ್ಕು ನೂರರಿಂದ ಎಂಟುನೂರು ಕಾಯಿ ಪಡೆಯುತ್ತಾನೆ.

ರೈತರು ಹಲಸಿನ ಹಣ್ಣನ್ನು ವ್ಯಾಪಾರಸ್ಥರಿಗೆ ಸ್ಥಳದಲ್ಲಿಯೆ ಹಣ್ಣಿನ ಗಾತ್ರದ ಮೇಲೆ ಹದಿನೈದರಿಂದ ಐವತ್ತು ರೂಪಾಯಿಗಳವರೆಗೆ ಮಾರುತ್ತಿದ್ದು ಈ ವ್ಯಾಪಾರಸ್ಥರು ಲೋಡುಗಟ್ಟಲೆ ಕೊಂಡು ನಗರ ಹಾಗು ಹೊರ ರಾಜ್ಯಗಳಲ್ಲಿ ವ್ಯಾಪಾರ ಮಾಡುತ್ತಾರೆ. ಒಬ್ಬ ರೈತನಿಗೆ ಹಣ್ಣು ಮತ್ತು ಎಳಸು ಕಾಯಿಗಳಿಂದ ರೂಪಾಯಿ ಐದು ಸಾವಿರದಿಂದ ಇಪ್ಪತ್ತು ಸಾವಿರದವರೆಗೆ ಆದಾಯ ಸಿಗುತ್ತದೆ ಎನ್ನುತ್ತಾರೆ ನಾರಾಯಣ ಸ್ವಾಮಿಯವರು.

ಲೇಖನ: ಸಿದ್ದರಾಮೇಗೌಡ

ಚೇಳೂರಿನ ಹಲಸಿನ ಸಂತೆ

ಬೆಂಗಳೂರಿನಲ್ಲಿ ನಡೆಸುವ 'ಮಾವು ಮೇಳ', 'ಕಡಲೆ ಕಾಯಿ ಪರಿಷೆ' ಗಳಂತೆ ಹಲಸಿಗೂ ಒಂದು ಸಂತೆ ನಡೆಯುತ್ತದೆ. ಅದೇ 'ಚೇಳೂರಿನ ಹಲಸಿನ ಸಂತೆ'.

ತಿಪಟೂರು – ಗುಬ್ಬಿ ಮಾರ್ಗದ ನಿಟ್ಟೂರಿನ ಸಮೀಪದ ಚೇಳೂರಿನಲ್ಲಿ ಪ್ರತಿ ವಾರ ಈ ಸಂತೆ ನಡೆಯುತ್ತದೆ. ಆದರೆ ಫೆಬ್ರವರಿಯಿಂದ ಜೂನ್ ತನಕ ಇಲ್ಲಿ ಹಲಸಿನ ಹಬ್ಬ , ವ್ಯಾಪಾರದ ಭರಾಟೆ. ಇದು ಸುಮಾರು ನಲವತ್ತು ವರುಷಗಳಿಂದ ನಡೆದು ಬಂದಿದೆ. ಜನರು, ವ್ಯಾಪಾರಿಗಳು ಚೇಳೂರಿನ ಹಲಸಿಗೆ ಒಗ್ಗಿಕೊಂಡಿದ್ದಾರೆ. ಬೇರೆಯ ಹಲಸಿಗೆ ವ್ಯಾಪಾರಿಗಳು ಬೆಲೆ ಕೊಡುವುದಿಲ್ಲ, ಹಲಸೆಂದರೆ ಚೇಳೂರಿನ ಹಲಸು ಎಂದು ಹೇಳುವರು. ಅದರಲ್ಲೂ ತುಮಕೂರು, ತಿಪಟೂರು, ಗುಬ್ಬಿ, ಚೇಳೂರಿನ ಸುತ್ತಮುತ್ತಲು ಬೆಳೆಯುವ ಬಕ್ಕೆ ಹಲಸಿಗೆ ಮೊದಲ ಆದ್ಯತೆ.

ತುಮಕೂರು ಜಿಲ್ಲೆಯಲ್ಲಿ ಹಲಸನ್ನು ಹೆಚ್ಚಾಗಿ ಬೆಳೆಯುತ್ತಾರೆ. ಗುತ್ತಿಗೆ ದಾರರು ಕಾಯಿಗಳು ಎಳಸಿರುವಾಗಲೇ ಮರಗಳನ್ನು ಗುತ್ತಿಗೆಗೆ ಪಡಿಯುತ್ತಾರೆ. ಕಾಯಿಗಳ ಸಂಖ್ಯೆ–ತಳಿ, ಆರೋಗ್ಯ ನೋಡಿ ವ್ಯವಹರಿಸುತ್ತಾರೆ. ಒಂದೊಂದು ಮರಕ್ಕೆ 2000–6000 ರೂಪಾಯಿಗಳ ವರೆಗೆ ರೈತರು ಪ್ರತಿಫಲ ಪಡೆಯುತ್ತಾರೆ. ಹಲಸಿನ ಗಾತ್ರ. ತೊಳೆಯ ಬಣ್ಣ ಇವುಗಳನ್ನಾದರಿಸಿ ಬೆಲೆ ನಿರ್ಧಾರವಾಗುತ್ತದೆ. ಗುತ್ತಿಗೆದಾರರು ಹಳ್ಳಿಗಳಿಂದ ಸಂಗ್ರಹಿಸಿ, ಬಾಡಿಗೆ ವಾಹನ, ರಿಕ್ಷಾ, ಸೈಕಲ್ಲುಗಳಲ್ಲಿ ಸಂತೆಗೆ ಸಾಗಿಸಿ ಮಾರಾಟ ಮಾಡುತ್ತಾರೆ.

ವಾಹನಗಳಲ್ಲಿ ಹಲಸು ಬಂದರೆ ವ್ಯಾಪಾರಿಗಳು ಮುತ್ತುತ್ತಾರೆ. ದರ ನಿಗದಿಗೆ ಪೈಪೋಟಿ. ಹೆಚ್ಚಿನ ಹಣ ಕೊಟ್ಟವರಿಗೆ ಹಣ್ಣು. ಹಣ್ಣುಗಳನ್ನು ಸಂಗ್ರಹಿಸಿ, ಬಳ್ಳಾರಿ, ದಾವಣಗೆರೆ, ಬೆಂಗಳೂರು, ಆಂಧ್ರದ ಅನಂತಪುರ, ಮುಂಬಯಿವರೆಗೂ ಸಾಗಿಸಲಾಗುತ್ತದೆ. ಚೇಳೂರಿನ ಹಲಸು ಮುಂಬಯಿ ಸೇರಿದರೆ ಕಿಲೋಗೆ 10 ರೂ. ಅಲ್ಲಿ ಗಾಡಿ ವ್ಯಾಪಾರಿಗಳು ಖಾಯಂ ಗಿರಾಕಿಗಳು. ಇವರ ಬೇಡಿಕೆಯ ಆಧಾರದಲ್ಲಿ ಚೇಳೂರಿನ ಹಲಸಿನ ಬೇಡಿಕೆ ಏರಿಳಿತವಾಗುತ್ತದೆ. ಗಾಡಿ ವ್ಯಾಪಾರಿಗಳು ಹಣ್ಣಿನ ತೊಳೆಗಳನ್ನು ಮಾರಾಟ ಮಾಡುತ್ತಾರೆ. ಗಾಡಿಯವರ ಮೂಲಕ ಪೇಟೆ ಜನರ ಬಾಯಿ ಸಿಹಿಯಾಗುತ್ತದೆ. ತೊಳೆಗೆ ಒಂದರಿಂದ ಎರಡು ರೂಪಾಯಿ. ಇಬ್ಬೀಡಿನ ರೀತಿ, ಎಳೆಯ ಕಾಯಿಗಳನ್ನು ತರಕಾರಿಯಾಗಿಯೂ ಬಳಸುತ್ತಾರೆ. ಅಂತಹ ಕಾಯಿಗೆ ಕಿಲೋಗೆ 15–20 ರೂಪಾಯಿ ದೊರೆಯುತ್ತದೆ, ಬೇಡಿಕೆ ಬಹಳ.

ಮೂಲ: ಅಡಿಕೆ ಪತ್ರಿಕೆ, ಮೇ 2005

ನಾರಾಯಣಪ್ಪನವರ ನಾಟಿ ವೈದ್ಯ ಪದ್ಧತಿಗಳು

ಕೋಲಾರ ಜಿಲ್ಲೆ ವೆಂಕಟರಾಜನ ಹಳ್ಳಿಯ ನಾರಾಯಣಪ್ಪನವರು ಮೂಲತಃ ರೈತರಾಗಿದ್ದು 30 ವರ್ಷಗಳಿಂದ ಸಾಕು ಪ್ರಾಣಿಗಳ ಹಾಗೂ ಮನುಷ್ಯರ ಹತ್ತಾರು ಕಾಯಿಲೆಗಳಿಗೆ ನಾಟಿ ಔಷಧಿಯನ್ನು ನೀಡಿ ಗುಣಪಡಿಸಿ ಸುತ್ತಮುತ್ತಲಿನ ಗ್ರಾಮಗಳಲ್ಲಿಉತ್ತಮ ಹೆಸರನ್ನು ಗಳಿಸಿದ್ದಾರೆ. ತೀರಾ ಗಂಭೀರ ಸ್ಥಿತಿಯಲ್ಲಿರುವ ಪಶುಗಳನ್ನೂ ಸಹ ಇವರಿಗೆ ತೋರಿಸಿ ಔಷಧ ಉಪಚಾರ ಪಡೆದರೆ ಖಂಡಿತ ವಾಸಿಯಾಗುವ ಸಾಧ್ಯತೆಯಿದೆ ಎಂಬ ನಂಬಿಕೆ ಸುತ್ತಲಿನ ಜನರಲ್ಲಿದೆ. ಅವರ ಕೆಲ ಔಷಧಿ ಹಾಗೂ ಚಿಕಿತ್ಸೆ ಕ್ರಮಗಳು ಹೀಗಿವೆ.

ದನಕರುಗಳಲ್ಲಿ ಕಾಲು ಬಾಯಿ ರೋಗನಿವಾರಣೆ (Foot and mouth disease):

(ಅ) ಇದಕ್ಕೆ ಮುಂಜಾಗ್ರತಾ ಕ್ರಮವಾಗಿ ಏಡಿ ಚಿಪ್ಪಿನಲ್ಲಿ ರಾಗಿ ಮುದ್ದೆಯನ್ನಿಟ್ಟು ಇದಕ್ಕೆ ಹಂದಿ ತುಪ್ಪ (ಹಂದಿ ಮಾಂಸ ಬೇಯಿಸುವಾಗ ಬರುವ ಎಣ್ಣೆ)ವನ್ನು ಸುರಿದು ದೀಪ ಹಚ್ಚಿ ದನದ ಕೊಟ್ಟಿಗೆಯಲ್ಲಿಡುವುದರಿಂದ ಕಾಲುಬಾಯಿ ರೋಗ ಬರದ ಹಾಗೆ ತಡೆಯಬಹುದಂತೆ.

ಈ ರೋಗದ ನಿಯಂತ್ರಣಕ್ಕೆ ಹೊಂಗೆ ಎಣ್ಣೆ *(Pongamia glabra)*ಯಲ್ಲಿ ಬಸವನ ಹುಳುವಿನ ಚಿಪ್ಪುಗಳನ್ನು ಪುಡಿ ಮಾಡಿ ಕಾಲಿಗೆ ಲೇಪಿಸಬೇಕು. ಬಿಸಿ ನೀರನ್ನು ಕಾಲಿಗೆ ಮತ್ತೆಮತ್ತೆಹಾಕುತ್ತಿರಬೇಕು. ಈ ರೀತಿ ಮಾಡುವುದರಿಂದ ಪೀಡಿತ ದನಕರುಗಳು ಗುಣಮುಖವಾಗುವುದಲ್ಲದೆ, ಆರೋಗ್ಯಕರವಾದ ದನಕರುಗಳಿಗೆ ರೋಗ ಹರಡುವುದನ್ನು ತಡೆಯಬಹುದು ಎಂಬುದಾಗಿ ನಾರಾಯಣಪ್ಪನವರು ಹೇಳುತ್ತಾರೆ.

(ಆ) ಕಾಲುಬಾಯಿ ರೋಗಕ್ಕೆ ಗುಜರಾತಿನ ಸಬರ್‌ಕಾಂತ ಜಿಲ್ಲೆಯ ಬೇಚರ್‌ಬಾಯ್ ವಂಕರ್ ಎಂಬುವರು ಬೇಲದ ಹಣ್ಣಿ *(Aegle marmelas)*ನ ತಿರುಳು ಮತ್ತು ಗಾಳಿ ತಡೆ ಮರ *(Clerodendrum phlomidis)*ದ ಎಲೆಗಳನ್ನು ಸಮ ಪ್ರಮಾಣದಲ್ಲಿ ಚಚ್ಚಿ ಮಿಶ್ರ ಮಾಡಿ ಬಾಯಿ ಮತ್ತು ಗೋರಸಿನ ಮೇಲೆ ಹಚ್ಚಿ ಬಟ್ಟೆಯಿಂದ ಕಟ್ಟುತ್ತಾರೆ. ಈ ರೀತಿ ಎರಡು–ಮೂರು ಸಾರಿ ಮಾಡುವುದರಿಂದ ರೋಗ ವಾಸಿಯಾಗುವುದೆಂಬುದು ಅವರ ಅನುಭವ.

ಅಲ್ಲದೆ ಬೇಲದ ಹಣ್ಣಿನ ತಿರುಳನ್ನು ಆಲದ ಮರದ ಹಾಲಿನೊಂದಿಗೆ ಮಿಶ್ರ ಮಾಡಿ ಹಚ್ಚುವುದರಿಂದಲೂ ಕಾಲುಬಾಯಿ ರೋಗವನ್ನು ಗುಣಪಡಿಸಬಹುದೆಂದು ಬೇಚರ್‌ಬಾಯ್ ಹೇಳುತ್ತಾರೆ.

ಮೂಲ: ***Honey Bee, Vol. 16(2), April-June, 2005***

ಕುಂದು, ನರಡಿ ರೋಗ

ಬಜಮಂಗಚಕ್ಕೆ *(Acorus calamus)* ಕಿಚ್ಚುನಾರು *(Boerhaalia diffusa)*, ಏಗುಚಕ್ಕೆ *(Lasiosiphon Eriocephalus)*, ನಗರದ ಚಕ್ಕೆ *(Cyperus scariousus)*, ಕಾಡು ಮೆಣಸು *(Toddalia asiatica)*, ಹೊಂಗೆ ಚಕ್ಕೆ *(Pongemia glabra)* ಇವುಗಳ ಜೊತೆಗೆ ಗ್ರಂಥಿಗೆ ಅಂಗಡಿಯಲ್ಲಿ ದೊರೆಯುವ ಕಸ್ತೂರಿ *(Delphinium brunonianum)*, ಗೋರೋಜನ *(Bezoar stone)*, ಮೆಣಸು *(Pinus nigrum)*, ಬೆಳ್ಳುಳ್ಳಿ *(Allium sativam)*, ಕೊಗಟೆಕಾಯಿ *(Sapindus Emarginatus)*, ಸೀಗೆ ಕಾಯಿ *(Acacia concinna)* ಪುಡಿ ಈ ಎಲ್ಲಾ ಮೂಲಿಕೆಗಳನ್ನು ಅರೆದು ಪುಡಿ ಮಾಡಿ ಬಿಸಿ ನೀರಿನಲ್ಲಿ ಹೊಟ್ಟೆಗೆ ಕೊಟ್ಟರೆ ಪಶುಗಳು ಚೇತರಿಸಿಕೊಳ್ಳುತ್ತವೆಯೆಂದು ನಾರಾಯಣಪ್ಪನವರು ತಿಳಿಸಿದ್ದಾರೆ.

ಪಶುಗಳ ಕಣ್ಣಿನಲ್ಲಿ ಬಿಳಿಯ ಪೊರೆ ಬೆಳೆಯುವುದು

ಈ ಸಮಸ್ಯೆಯಿದ್ದಲ್ಲಿ ಕೋಳಿಮೊಟ್ಟೆ ಸೊಪ್ಪ *(Rotala verticillaris)*ನ್ನು ಬಾಯಿಯಲ್ಲೆ ಕಿತ್ತುಕೊಂಡು ಅದಕ್ಕೆ ಅಡುಗೆ ಉಪ್ಪನ್ನು ಸೇರಿಸಿ ಅಗೆದು ಕಣ್ಣಿಗೆ ಊದುವುದರಿಂದ ಈ ಸಮಸ್ಯೆಯು ಬಹು ಬೇಗನೆ ಉಪಶಮನವಾಗುವುದು ಎಂಬುದು ನಾರಾಯಣಪ್ಪನವರ ಚಿಕಿತ್ಸೆ.

ಪಶುಗಳಲ್ಲಿ ಬಾವು ಸಮಸ್ಯೆಯಿದ್ದಲ್ಲಿ:

ತೊಟ್ಟಿಲು ಗಿಡದ ಚಕ್ಕೆ (ಹುಣಸೆ ಮರದ ಕೆಳಗೆ ಬೆಳೆದಿರುವಂತಹುದು), ಎಸಗಳೆ/ ಎಗಚೆ/ಬಿಳಿ ಉಪ್ಪೆ ಚಕ್ಕೆ, ಕಾಡು ಪಾಕು ಚಕ್ಕೆ, ಕರಿ ಉಪ್ಪು ಗಿಡದ ಚಕ್ಕೆ *(Capparisaphylla azimate tracantha)* ಈ ಎಲ್ಲಾ ಮೂಲಿಕೆಗಳನ್ನು ಒಣಗಿಸಿ ಪುಡಿಮಾಡಿ ಹಸುವಿನ ಹಾಲಿನಲ್ಲಿ ಹೊಟ್ಟೆಗೆ ಕೊಡುವುದರಿಂದ ಬಾವು ನಿಯಂತ್ರಣಕ್ಕೆ ಬರುತ್ತದಿಯಂತೆ.

ಕಣ್ಣಾಮುಚ್ಚಾಲೆ ಕಾಯಿಲೆ: (ಪಶುಗಳಲ್ಲಿ ಪೆಟ್ಟು ಬಿದ್ದು ದುರ್ಮಾಂಸ ಬೆಳೆದುಕೊಳ್ಳುವುದು) ಈ ಸಮಸ್ಯೆಗೆ ಮೈಲು ತತ್ತಿ ಹಾಲು ತತ್ತಿ ಇಂಗಳೀಕ *(Balanites roxburghii)*, ರಸ್ಸಿಂಧೂರ ಪುಡಿ *(Mercuric sulphide)* ಈ ಎಲ್ಲಾ ವಸ್ತುಗಳನ್ನು ಎಣ್ಣೆಯಲ್ಲಿ ಕಲಸಿ ಗಾಯಕ್ಕೆ ಹಚ್ಚುವುದರಿಂದ ನಿಯಂತ್ರಿಸಬಹುದು.

ಈ ಮಾಹಿತಿಗಳನ್ನು ಶ್ರೀ ರಾಮಯ್ಯ ವಿ.ಎನ್ (ನಾರಾಯಣಪ್ಪನವರ ಮಗ) ಎಂಬ ಕೃಷಿ ವಿದ್ಯಾರ್ಥಿಯು ಹಿತ್ತಲಗಿಡಕ್ಕೆ ಒದಗಿಸಿರುತ್ತಾರೆ.

ವಿಳಾಸ: ನಾರಾಯಣಪ್ಪ, ಬಿನ್. ಮುನಿಯಪ್ಪ, ವೆಂಕಟರಾಜನ ಹಳ್ಳಿ, ಹುಡದೇನ ಹಳ್ಳಿ ಅಂಚೆ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ

ಹಿರೇಮದ್ದಿನ ಗಿಡದ ಪ್ರಾಮುಖ್ಯತೆ

ದೇವನಹಳ್ಳಿ ತಾಲ್ಲೂಕು ಚೆನ್ನರಾಯಪಟ್ಟಣದ ಎಂ. ಗೋಪಾಲ ಕೃಷ್ಣಪ್ಪ ಇವರು ಹಿರೆಮದ್ದಿನ ಗಿಡ *(Withania sommifera)*ದ ಔಷಧೀಯ ಗುಣವನ್ನು ತಿಳಿಸಿದ್ದಾರೆ. ಹಸುವಿನ ಕೆಚ್ಚಲಿನಲ್ಲಿ ಗಂಟು ಇದ್ದಲ್ಲಿ ಹಾಲು ಕೊಡದೆ ಇದ್ದ ಸಮಯದಲ್ಲಿ ಹಿರೇಮದ್ದಿನ ಗಿಡದ ಎಲೆಗಳನ್ನು ಚೆನ್ನಾಗಿ ಅರೆದು ರಸವನ್ನು ಹಸುವಿಗೆ ಕುಡಿಸಬೇಕು ಮತ್ತು ಸೊಪ್ಪನ್ನು ಕೆಚ್ಚಲಿಗೆ ಹಚ್ಚಬೇಕು. ಈ ರೀತಿ ಸಂಜೆಯ ಹೊತ್ತಿನಲ್ಲಿ ಮಾಡಿದರೆ ಬೆಳಗಿನ ಜಾವಕ್ಕೆ ಗಂಟು ಮಾಯವಾಗಿ ಹಸು ಎಂದಿನಂತೆ ಹಾಲು ಕೊಡುತ್ತದೆ ಎಂದು ಗೋಪಾಲಕೃಷ್ಣಪ್ಪನವರು ಹೇಳುತ್ತಾರೆ.

ಸಂಗ್ರಹ: ಹೇಮಲತ ಕೆ.ಜೆ., 4ನೇ ಬಿಎಸ್ಸಿ. (ಕೃಷಿ) ಕೃಷಿ ವಿ.ವಿ., ಬೆಂಗಳೂರು

ಪ್ರತಿಕ್ರಿಯೆ

ಸಂಪಾದಕರಿಗೆ,

ತಮ್ಮ ಪತ್ರಿಕೆಯಲ್ಲಿ (ಜನವರಿ – ಏಪ್ರಿಲ್, 2005) ಪ್ರಕಟಗೊಂಡ ಬಸವರಾಜು ಸಂತೇಶಿವರರ ಬಸವನ ಹುಳು ನಿಯಂತ್ರಣ ಓದಿ ಕುತೂಹಲ ಕೆರಳಿತು. ಬಹಳ ದಿನದಿಂದ ತೊಂದರೆ ಮಾಡುತ್ತಿದ್ದುದನ್ನು ನಿಲ್ಲಿಸುವ ದಿನ ಬಂದದ್ದನ್ನು ನಮ್ಮ ಸುತ್ತಲಿನ ರೈತರಿಗೆ ತಿಳಿಸಿದೆವು. ನಾವೇ ಸಂತೇಶಿವರ ಅವರಲ್ಲಿಗೆ ಹೋಗಿ ತಿಳಿದು ಬರೋಣವೆಂದು ನಾಲ್ಕು ಮಂದಿ ಹೊರಟೆವು. ಅವರ ಮನೆಯಲ್ಲಿ ಒಳ್ಳೆ ಆತಿಥ್ಯ ದೊರೆತು ಎರಡು ದಿನ ಉಳಿದೆವು. ರೈತನ ಮನೆಯಲ್ಲಿ ಊಟಕ್ಕೇನೂ ಬರವಿಲ್ಲ ಎಂಬುದನ್ನು ತೋರಿಸಿಕೊಟ್ಟರು. ನಮ್ಮನ್ನು ಯಾವ ರೀತಿ ವ್ಯವಸಾಯಕ್ಕೆ ತೊಡಗಿಸಿಕೊಳ್ಳಬೇಕೆಂಬುದನ್ನು ಅವರಿಂದ ಅರಿತೆವು. ಮುಂಜಾನೆ 5 ರಿಂದ ಸಂಜೆ 7ರವರೆವಿಗೂ ನಿಯಮದಂತೆ ಕೆಲಸ ಮಾಡುತ್ತಾರೆ. ದಣಿವು ಎಂಬುದು ಅವರಿಗೆ ಕಾಣುವುದಿಲ್ಲ. ಅವರ ಪ್ರಯೋಗಗಳು ಅನೇಕ. ವಾರ್ಷಿಕ ಬೆಳೆಗಳಲ್ಲಿ ಬಹುವಾರ್ಷಿಕ ಬೆಳೆಗಳಲ್ಲಿ ರೋಗ ಕೀಟ ನಿಯಂತ್ರಣದ ಅವರ ವಿಧಾನ ವಿಶ್ವವಿದ್ಯಾನಿಲಯಕ್ಕೆ ಹೋದರೂ ದೊರೆಯದು. ಒಂದಾ, ಎರಡಾ, ಹೇಳಲು ತೊಡಗಿದರೆ ಒಂದು ಪುಸ್ತಕವನ್ನೇ ಬರೆಯಬಹುದು. ಉದಾಹರಣೆಗೆ ಒಂದು ರಾತ್ರಿ ತೋಟಕ್ಕೆ ಹೋಗಿ ಗೂಬೆಗಳೊಂದಿಗೆ ಆಟವಾಡಿದೆವು. ಅವರ ತೋಟದಲ್ಲಿ ಒಂದು ಸೊಳ್ಳೆಯೂ ಕಚ್ಚಲಿಲ್ಲ.

ಅವರ ಈ ಬಸವನ ಹುಳ ನಿಯಂತ್ರಣದ ಪ್ರಯೋಗಕ್ಕೆ ಸುಣ್ಣ ಉಪ್ಪು ಉಪಯೋಗಿಸಿದ್ದಾರೆ ಅದರಿಂದ ಮಣ್ಣಿನ ರಸಸಾರ (PH) ಹಾಳಾಗುತ್ತದೆ ಎಂಬುದನ್ನು ಅವರೇ ಹೇಳಿದರು. ಆದರೆ ಅವರು ಆ ವಸ್ತುಗಳು ಮಣ್ಣಿಗೆ ಸೇರದಂತೆ ಪ್ರಯೋಗದಲ್ಲಿ ಬಾಳೆ ಮರದ ಪಟ್ಟೆ (ದೋಣಿ ಆಕಾರದಲ್ಲಿರುವಂತೆ) ಯನ್ನು ಉಪಯೋಗಿಸಿದ್ದಾರೆ. ತಮಗೆ ಎಷ್ಟು ನಮನ ಹೇಳಿದರೂ ಸಾಲದು, ಈ ರೀತಿಯ ರೈತರನ್ನು ಹೊರ ತಂದು ಪರಿಚಯಿಸಿರುವುದಕ್ಕೆ.

ಕೋದಂಡರಾಮಯ್ಯ, ತುಮಕೂರು ಜಿಲ್ಲೆ

ನಮಸ್ಕಾರ,

ನಾನು 'ಹಿತ್ತಲಗಿಡ' ಪತ್ರಿಕೆಯ ಖಾಯಂ ಓದುಗ ಅಭಿಮಾನಿ. ಮೊದಲನೆ ಬಾರಿ ನಿಮಗೆ ಪತ್ರ ಬರೆಯುತ್ತ ನಿಮ್ಮ ಸಾರ್ಥಕ ಪ್ರಯತ್ನಕ್ಕೆ ಅಭಿನಂದಿಸುತ್ತೇನೆ. ನಾನು ಕದಂಬರ ರಾಜಧಾನಿಯಾದ ಬನವಾಸಿಯಲ್ಲಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಇಲ್ಲಿನ ಅದೆಷ್ಟೋ ಸಾಂಪ್ರದಾಯಿಕ ಆಚರಣೆ, ವಿಚಾರಗಳ ಸಮೃದ್ಧ ಕ್ಷೇತ್ರ ಇದಾಗಿದ್ದು, ಈ ಕುರಿತು ದಾಖಲಿಸುತ್ತಿದ್ದೇನೆ. ಒಂದು ವಿಚಾರ ಏನೆಂದರೆ ಇಲ್ಲಿನ ಜನಗಳು ಪ್ರತಿವರ್ಷ ಹಾಲಿನ ಹೆಪ್ಪು ಬದಲಾಯಿಸುತ್ತಾರೆ. ಸ್ವಾತಿ ಮಳೆಯ ನೀರನ್ನು ಹಾಲಿಗೆ ಹಾಕುತ್ತಾರೆ. ಹಾಲು ಹೆಪ್ಪಾಗುತ್ತದೆ. ಸ್ವಾತಿ ಮಳೆಯ ನೀರನ್ನು ಹಾಕಿ ಹೊಸ ಹೆಪ್ಪು ಮಾಡಿಕೊಳ್ಳುತ್ತಾರೆ. ಇಂತಹ ಅದೆಷ್ಟೋ ತಾಂತ್ರಿಕತೆಗಳು ಇಲ್ಲಿವೆ. ಹಿತ್ತಲಗಿಡ ಪತ್ರಿಕೆಗೆ ಇನ್ನು ಹೆಚ್ಚಿನ ಮಾಹಿತಿಯನ್ನು ಒದಗಿಸಲಿದ್ದೇನೆ. ಈ ಮಹಾಕಾರ್ಯಕ್ಕೆ ನಾನೂ ನಿಮ್ಮೊಂದಿಗಿರುತ್ತೇನೆ.

ಅನೇಕಟ್ಟೆ ವಿಶ್ವನಾಥ, ಬನವಾಸಿ, ಶಿರಸಿ ತಾಲ್ಲೂಕು, ಉತ್ತರ ಕನ್ನಡ

(ಧನ್ಯವಾದಗಳು, ಇಂತಹ ಆಚರಣೆಗಳನ್ನು ವಿಶಾದವಾಗಿ ಬರೆದು ಕಳುಹಿಸಬೇಕಾಗಿ ವಿನಂತಿ, ಸಂ.)

ಡಾ. ಪ್ರಕಾಶ್‌ಜಿ,

ಬೆಂಗಳೂರಿನಲ್ಲಿ ಕ್ರಿಯೇಟ್ ಸಂಸ್ಥೆಯು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಭೇಟಿಯಾದ ನಂತರ ಇದು ಪತ್ರದ ಮೂಲಕ ಸಂಪರ್ಕ. 'ಹಿತ್ತಲ ಗಿಡ' ಜನವರಿ–ಏಪ್ರಿಲ್ 2005ರ ಸಂಚಿಕೆಯು ಕೈ ಸೇರಿದೆ. ಚೆನ್ನಾಗಿ ಮೂಡಿ ಬಂದಿದೆ.

ಜಿ.ಜಿ. ಹೆಗಡೆ ಕಡೇಕೋಡಿ, ಚೌತಿಮಠ ರಸ್ತೆ ಶಿರಸಿ–581401

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/–	ರೂ.400/–
ರೈತರು	ರೂ.60/–	ರೂ.500/–
ಇತರರು	ರೂ.75/–	ರೂ.600/–
ಸಂಸ್ಥೆಗಳು	ರೂ.350/–	ರೂ.2500/–
ಪೋಷಕರು	ರೂ.5000/– ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *'ಸಂಪಾದಕರು, ಹಿತ್ತಲಗಿಡ, ಬೆಂಗಳೂರು'* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಐದನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 7,500 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ 7,500 ಸಾಂತ್ವಾನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟದ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ , ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಐದನೇ ಸ್ಪರ್ಧೆಗೆ ಡಿಸೆಂಬರ್ 2005ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು 'ಪೂರ್ವ ಸೂಚಿತ ಸಮ್ಮತಿ' **(Prior Informed Consent)** ಪಡೆದ ನಂತರವೇ ಮುಂದುವರೆಯಲಾಗುವುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ, ...

....

....

....

ವಿಳಾಸ
ಡಾ. ಟಿ. ಎಸ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025 (ರ)
email: hittalu@bgl.vsnl.net.in